ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 30, 2021

ಸಂಪುಟ : 47 ಸಂಚಿಕೆ : 330 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಪಾಲಿಕೆ ಉಪ ಚುನಾವಣೆ: ಶೇ.56.71ರಷ್ಟು ಮತದಾನ

### ಮುಖಂಡರುಗಳ ಪರಿಶ್ರಮದ ನಡುವೆಯೂ ಮತದಾನಕ್ಕೆ ನಿರುತ್ಸಾಹ

ದಾವಣಗೆರೆ, ಮಾ.29- ಮಹಾನಗರ ಪಾಲಿಕೆ ಎರಡು ಸ್ಥಾನಗಳಿಗೆ ನಡೆದ ಉಪ ಚುನಾವಣೆ ಶಾಂತಿಯುತವಾಗಿ ನಡೆದಿದ್ದು, ಶೇ. 56.71 ರಷ್ಟು ನೀರಸ ಮತದಾನವಾಗಿದೆ.

ವಾರ್ಡ್ ನಂ.20ರ ಭಾರತ್ ಕಾಲೋನಿಯಲ್ಲಿ 7 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. 7398 ಮತದಾರರ ಪೈಕಿ 2265 ಪುರುಷರು, 2228 ಮಹಿಳೆಯರು ಸೇರಿ ಒಟ್ಟು 4493 ಮತದಾರರು ಮತ ಚಲಾಯಿಸಿದ್ದಾರೆ. ಶೇ.60.73ರಷ್ಟು ಮತದಾನವಾಗಿದೆ.

ವಾರ್ಡ್ ಸಂಖ್ಯೆ 22ರ ಯಲ್ಲಮ್ಮನಗರದಲ್ಲಿ 8 ಮತ ಕೇಂದ್ರಗಳಲ್ಲಿ ಮತದಾನ ನಡೆದಿದ್ದು, 8056 ಮತದಾರರ ಪೈಕಿ 2113 ಪುರುಷರು ಹಾಗೂ 2131 ಮಹಿಳೆಯರು ಸೇರಿದಂತೆ ಒಟ್ಟು 4244 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಒಟ್ಟಾರೆ ಶೇ.52.68ರಷ್ಟು ಮತದಾನವಾಗಿದೆ.

ಬೆಳಿಗ್ಗೆ ಹೋಳಿ ಹಬ್ಬ ಇದ್ದುದರಿಂದ ಮತದಾರರು ಮತದಾನಕ್ಕೆ ಅಷ್ಟಾಗಿ ಉತ್ಸಾಹ ತೋರಿರಲಿಲ್ಲ. ಆದರೆ 11 ಗಂಟೆ ವೇಳೆಗೆ ಎರಡೂ ವಾರ್ಡ್‌ಗಳಲ್ಲಿ ಮತದಾನ ಚುರುಕು ಪಡೆಯಿತಾದರೂ, ಬಿಸಿಲ ಧಗೆ, ಹೋಳಿ ಹಾಗೂ ಮರು ಮತದಾನಕ್ಕೆ ಬೇಸತ್ತ ಮತದಾರ ಪ್ರಭು ಅಷ್ಟಾಗಿ ಆಸಕ್ತಿ ತೋರಲಿಲ್ಲ.

ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಯಿತು. 9 ಗಂಟೆಗೆ ಎರಡೂ ವಾರ್ಡ್‌ಗಳಲ್ಲಿ ಶೇ.4.4ರಷ್ಟು ಮತದಾನವಾಗಿತ್ತು. 11 ಗಂಟೆ ವೇಳೆಗೆ ಎರಡೂ ವಾರ್ಡ್‌ಗಳಲ್ಲಿ ಶೇ.17.23ರಷ್ಟು ಮತದಾನವಾದರೆ, ಮಧ್ಯಾಹ್ನ 1 ಗಂಟೆ ಸುಮಾರಿಗೆ 31.43ರಷ್ಟು ಹಾಗೂ ಮೂರು ಗಂಟೆ ವೇಳೆಗೆ ಶೇ.41.9ರಷ್ಟು ಮತದಾನವಾಗಿತ್ತು.

**ವಾರ್ಡ್‌ಗಳಲ್ಲಿ ಮುಖಂಡರ ದಂಡು:** ಪಾಲಿಕೆಯಲ್ಲಿ ಅಧಿಕಾರದ ಗದ್ದುಗೆ ಹಿಡಿಯಲು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳಿಗೆ ಈ ಎರಡೂ ವಾರ್ಡ್‌ಗಳು ಚುನಾವಣೆ ಅತಿ **(5ನೇ ಪುಟಕ್ಕೆ)**



**ದಾವಣಗೆರೆಯ 22ನೇ ವಾರ್ಡ್ ಯಲ್ಲಮ್ಮ ನಗರದಲ್ಲಿ ವೃದ್ದೆಯೊಬ್ಬರು ಮತದಾನ ಮಾಡಲು ಆಗಮಿಸಿದ್ದರು.**

# ಲಾಕ್ ಮಾಡಲ್ಲ ಶಾಲೆಗೆ ರಜೆ ಇಲ್ಲ

### 15 ದಿನಗಳ ಕಾಲ ಮೆರವಣಿಗೆ, ಧರಣಿಗೆ ಅವಕಾಶವಿಲ್ಲ : ಸಿಎಂ

ಬೆಂಗಳೂರು, ಮಾ.29 - ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಇಲ್ಲ, ಕರ್ಫ್ಯೂ ಇಲ್ಲ, ಶಾಲಾ ಕಾಲೇಜು ಗಳಿಗೆ ರಜೆನೂ ಇಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಕರೆಯಲಾಗಿದ್ದ ಉನ್ನತ ಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿರುವ ಬಗ್ಗೆ ತಿಳಿಸಿರುವ ಅವರು, ನಾಳೆಯಿಂದ 15 ದಿನಗಳ ಕಾಲ ಯಾವುದೇ ಸಾರ್ವಜನಿಕ ಮೆರವಣಿಗೆ, ಧರಣಿ ನಡೆಸುವಂತಿಲ್ಲ ಎಂದು ಹೇಳಿದ್ದಾರೆ.

ಮಾಸ್ಕ್ ಹಾಕದಿದ್ದರೆ ನಾಳೆಯಿಂದ ದಂಡ, ಕೊರೊನಾ ನಿಯಂತ್ರಣಕ್ಕಾಗಿ ಆರ್ಥಿಕ ಚಟುವಟಿಕೆಗೆ ಹಿನ್ನಡೆಯಾಗದಂತೆ ಕಠಿಣ ಕ್ರಮ ಕೈಗೊಳ್ಳಬೇಕು, ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಕಡ್ಡಾಯ. ಈ ಸಂಬಂಧ ಜಿಲ್ಲಾಡಳಿತಗಳು ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದೂ ಮುಖ್ಯಮಂತ್ರಿ ಹೇಳಿದ್ದಾರೆ.

ಕೋವಿಡ್ ನಿರ್ವಹಣೆಗೆ ಅನುದಾನದ ಯಾವುದೇ ಕೊರತೆ ಇಲ್ಲ. ಈಗಾಗಲೇ 150 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅಗತ್ಯ ಬಿದ್ದಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗುವುದು.

ಕೇರಳ ಮತ್ತು ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷೆ ನೆಗೆಟಿವ್ ವರದಿ ಕಡ್ಡಾಯ. ಪ್ರಯಾಣಿಕರು ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೋರಿದೆ. ಸಾರ್ವಜನಿಕರು ಜಾಗೃತರಾಗಿ, ಮಾಸ್ಕ್ ಧಾರಣೆ, ಸಾಮಾಜಿಕ ಅಂತರ ಕಾಪಾಡುವುದು ಮತ್ತು ಇತರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ **(5ನೇ ಪುಟಕ್ಕೆ)**

### ಮುಖ್ಯ ಕಾರ್ಯದರ್ಶಿಯೇ ನಿರ್ಧಾರ ಪ್ರಕಟಿಸಬೇಕು

**ಸಚಿವರು, ಅಧಿಕಾರಿಗಳು ಕೊರೊನಾ ಬಗ್ಗೆ ಹೇಳಿಕೆ ನೀಡದಂತೆ ಸಿಎಂ ನಿರ್ಬಂಧ**

ಕೋವಿಡ್ ನಿಯಂತ್ರಣ ವಿಷಯದಲ್ಲಿ ಮುಖ್ಯ ಕಾರ್ಯದರ್ಶಿಯವರೇ ನಿರ್ಧಾರಗಳನ್ನು ಪ್ರಕಟಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ತಮ್ಮ ಜೊತೆ ಸಮಾಲೋಚನೆ ನಡೆಸಿದ ನಂತರ ಆದೇಶ ಹೊರಡಿಸಬೇಕು. ಈ ಆದೇಶ ಗಳಿಗೆ ಸಂಬಂಧಿಸಿದಂತೆ ಸಚಿವರು ಹಾಗೂ ಅಧಿಕಾರಿಗಳು ವಿವರಣೆ ನೀಡಬಹುದೇ ವಿನಃ ಹೊಸ ನಿರ್ಬಂಧಗಳನ್ನು ಹೇರಿಸುವ ಬಗ್ಗೆ ಪತ್ರಿಕಾ ಹೇಳಿಕೆ ನೀಡಬಾರದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಇನ್ನು ಮುಂದೆ ಆರೋಗ್ಯ, ಶಿಕ್ಷಣ ಇಲಾಖೆಯಾಗಲೀ, ಸಂಬಂಧಪಟ್ಟ ಸಚಿವರಾಗಲೀ, ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಂತಿಲ್ಲ. ಮುಖ್ಯ ಕಾರ್ಯದರ್ಶಿ ಹೊರಡಿಸುವ ಆದೇಶಗಳ ಆಧಾರದ ಮೇಲೆ ಆರೋಗ್ಯ, ಶಿಕ್ಷಣ ಇಲಾಖೆ ಮತ್ತು ಇತರೆ ಇಲಾಖೆಗಳು ನಿರ್ದಿಷ್ಟ ಮಾರ್ಗಸೂಚಿ ಪ್ರಕಟಿಸಬೇಕು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

## ಅಬ್ಬರವಿಲ್ಲದ ಆತ್ಮೀಯತೆಯ ಹೋಳಿ

### ಡಿ.ಜೆ. ಕುಣಿತ, ಕೇಕೆ, ಆರ್ಭಟದ ಸೊಲ್ಲಡಗಿಸಿದ ಕೊರೊನಾ

ದಾವಣಗೆರೆ, ಮಾ. 29 - ಕೊರೊನಾ ಕಾರಣದಿಂದಾಗಿ ಸಾರ್ವಜನಿಕ ಹೋಳಿ ಆಚರಣೆಗೆ ಜಿಲ್ಲಾಡಳಿತ ಕಡಿವಾಣ ಹಾಕಿದ ಪರಿಣಾಮವಾಗಿ, ಎಂದಿನಂತೆ ಡಿ.ಜೆ. ಆರ್ಭಟ, ಯುವಕರ ಉನ್ಮಾದದ ಕುಣಿತ, ಕೇಕೆ ಹಾಗೂ ಬೈಕುಗಳ ಆರ್ಭಟವಿಲ್ಲದೇ ಜನರು ಆತ್ಮೀಯತೆಯಿಂದ ಬಣ್ಣಗಳ ಹಬ್ಬವನ್ನು ಆಚರಿಸಿಕೊಂಡಿದ್ದಾರೆ.

ನಗರದ ರಾಂ ಅಂಡ್ ಕೋ ಸರ್ಕಲ್ ಪ್ರತಿ ವರ್ಷ ಬಟ್ಟೆ ಹರಿದುಕೊಳ್ಳುವ ಓಕುಳಿ ಆಚರಣೆ ಕೇಂದ್ರವಾಗಿರುತ್ತಿತ್ತು. ಈ ಬಾರಿ ಕೊರೊನಾ ನಿರ್ಬಂಧದ ಕಾರಣದಿಂದಾಗಿ ವೃತ್ತದಲ್ಲಿ ಸಾಮಾನ್ಯ ವಾತಾವರಣವಿತ್ತು.

ಒಂದೆಡೆ ಯುವಕರು ಡಲ್ ಆಗಿದ್ದರೆ, ಮತ್ತೊಂದೆಡೆ ಬಾಲಕರು ಮನಸೋಇಚ್ಛೆ ಓಕುಳಿ ಆಡಿ ಸಂಭ್ರಮಿಸಿದರು. ಕುಟುಂಬದವರು, ಆತ್ಮೀಯರು ಹಾಗೂ ಗೆಳೆಯರೊಂದಿಗೆ ಸದ್ದು - ಗದ್ದಲವಿಲ್ಲದೇ ಬಣ್ಣ ಹಂಚಿಕೊಂಡು ಸಂಭ್ರಮಿಸಿ ದೃಶ್ಯ ಬೆಳಿಗ್ಗೆಯಿಂದ ಮಧ್ಯಾಹ್ನ ಬಿಸಿಲು ಚುರುಕಾಗುವವರೆಗೆ ಕಂಡು ಬಂತು.

ತ್ರಿಬ್ಬಲ್ ರೈಡಿಂಗ್, ಹೆಲ್ಮೆಟ್ ಹಾಗೂ ಮಾಸ್ಕ್ ರಹಿತವಾಗಿ ಯುವಕ - ಯುವತಿಯರು ರಸ್ತೆ ಸಂಚಾರ **(2ನೇ ಪುಟಕ್ಕೆ)**



## ಬಾವಲಿಯಿಂದ ಕೊರೊನಾ ಪ್ರಯೋಗಾಲಯದಿಂದಲ್ಲ

ಬೀಜಿಂಗ್, ಮಾ.29- ಬಾವಲಿಯಿಂದ ಮನುಷ್ಯರಿಗೆ ಕೊರೊನಾ ವೈರಸ್ ಹರಡಿರಬಹುದೇ ವಿನಃ ಪ್ರಯೋಗಾಲಯದಿಂದ ಹರಡಿರುವ ಸಾಧ್ಯತೆ ಇಲ್ಲ ಎಂದು ಡಬ್ಲ್ಯೂ.ಹೆಚ್.ಒ. ವರದಿ ತಿಳಿಸಿದೆ.

ಚೀನಾದಲ್ಲಿ ಮೊದಲು ಕಾಣಿಸಿಕೊಂಡ ವೈರಸ್ ಕುರಿತು ಈ ಹೊಸ ಬೆಳಕು ಚೆಲ್ಲಲಾಗಿದೆಯಾದರೂ ಹಲವು ಪ್ರಶ್ನೆಗಳಿಗೆ ಇನ್ನೂ ಉತ್ತರ ಪಡೆಯಲು ಸಾಧ್ಯವಾಗಿಲ್ಲ. ಪ್ರಯೋಗಾಲಯದ ಮೂಲಕ ವೈರಸ್ ಸೋರಿಕೆಯಾಗಿರುವ ಸಾಧ್ಯತೆ ಹೊರತುಪಡಿಸಿ ಬೇರೆ ಹಲವು ವಿಷಯಗಳ ಕುರಿತು ಇನ್ನಷ್ಟು ತನಿಖೆಗೆ ಅಧ್ಯಯನ ತಂಡ ಪ್ರಸ್ತಾಪಿಸಿದೆ.

ವರದಿ ಬಿಡುಗಡೆ ಪದೇ ಪದೇ **(5ನೇ ಪುಟಕ್ಕೆ)**

## ಜಲಶಕ್ತಿ ಅಭಿಯಾನಕ್ಕೆ ರಾಜ್ಯದಲ್ಲಿ ಚಾಲನೆ

ಬೆಂಗಳೂರು, ಮಾ. 29 - ಸತತ ಬರಗಾಲಕ್ಕೆ ಸಿಲುಕಿರುವ ರಾಜ್ಯದಲ್ಲಿ ಜಲಮೂಲ ವೃದ್ಧಿಸಲು ಜಲಶಕ್ತಿ ಅಭಿಯಾನಕ್ಕೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಗ್ರಾಮೀಣ ಅಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ಸರ್ಕಾರದ ಈ ನಿರ್ಧಾರದಿಂದ ಜಲಮೂಲ ವೃದ್ಧಿಸುವುದರ ಜೊತೆ ದುಡಿಯುವ ಕೈಗಳಿಗೆ ಕೆಲಸ ನೀಡಿದಂತಾಗುತ್ತದೆ ಎಂದರು.

ಬೇಸಿಗೆ ಸಂದರ್ಭದಲ್ಲಿ ಜನ ಮತ್ತು ಜಾನುವಾರುಗಳು ನೀರಿಗಾಗಿ ಪರಿತಪಿಸುವ ಸಮಸ್ಯೆ ರಾಜ್ಯದ ಹಲವಡೆ ಇದೆ. ಹಾಗೆಯೇ ಅಕಾಲಿಕ ಮತ್ತು ಅನಿಶ್ಚಿತ ಮಳೆಯಿಂದಾಗಿ ಬೆಳೆಗಳು ಒಣಗಿ ರೈತರು ಸಂಕಷ್ಟಕ್ಕೆ **(2ನೇ ಪುಟಕ್ಕೆ)**

## ಕೊಡದಗುಡ್ಡದ ವೀರಭದ್ರ ಸ್ವಾಮಿ ತೇರು

ಜಗಳೂರು, ಮಾ.29 - ತಾಲ್ಲೂಕಿನ ಕೊಡದಗುಡ್ಡ ವೀರಭದ್ರಸ್ವಾಮಿ ರಥೋತ್ಸವ ಕೋವಿಡ್ ಹಿನ್ನೆಲೆಯಲ್ಲಿ ಸರಳವಾಗಿ ಜರುಗಿತು.

ಪ್ರತಿವರ್ಷ ಸಹಸ್ರಾರು ಸಂಖ್ಯೆಯಲ್ಲಿ ಪಾದ ಯಾತ್ರೆಯ ಮೂಲಕ ಆಗಮಿಸುತ್ತಿದ್ದ ಭಕ್ತಾದಿಗಳಿಗೆ ಎರಡನೇ ಕೋವಿಡ್ ಅಲೆ ನಿರಾಸೆ ಮೂಡಿಸಿತು.

ರಥೋತ್ಸವಕ್ಕೆ ಬಾಳೆ ಹಣ್ಣು, ಉತ್ತತ್ತಿ, ಹೂವು, ಕಾಯಿ ಸಮರ್ಪಿಸಿ, ಭಕ್ತಿ ಮೆರೆದರು. ಸಮಾಳ, ವಾದ್ಯ, ನಂದಿಕೋಲು, ಕುಣಿತದೊಂದಿಗೆ ವೀರಗಾಸೆ ವೇಷದಲ್ಲಿ ಹೆಜ್ಜೆ ಹಾಕಿದ್ದು ಭಕ್ತರ ಮನಸ್ಸನ್ನು ಆಕರ್ಷಿಸಿತು.

**ಪಾಳೆಯಗಳಿಗೆ ಬ್ರೇಕ್:** ಪ್ರತಿವರ್ಷ ನೆರೆಹೊರೆಯ ತಾಲ್ಲೂಕುಗಳಿಂದ ಆಗಮಿಸಿ, ಪಾಳೆಯ ಹಾಕುತ್ತಿದ್ದ ಭಕ್ತರಿಗೆ ಕೋವಿಡ್ ನಿಯಮ ಪಾಲನೆಯಿಂದ ಬ್ರೇಕ್ ಹಾಕಲಾಗಿತ್ತು. ಸ್ಥಳೀಯರು ಎತ್ತಿನಗಾಡಿ ಆಟೋಗಳ ಮೂಲಕ ಆಗಮಿಸಿ, ಪೂಜೆ ಕಾರ್ಯಕ್ರಮ ನಡೆಸಿ ನಂತರ ರೊಟ್ಟಿ ಇತರೆ ಆಹಾರ ಸೇವಿಸಿ ರಥೋತ್ಸವದ ನಂತರ ಹಿಂತಿರುಗಿದರು.

**ದರ್ಶನ ಪಡೆದ ಶಾಸಕ ಎಸ್.ವಿ. ರಾಮಚಂದ್ರ:** ವೀರಭದ್ರ ರಥೋತ್ಸವ ಜರುಗುವ ಮುನ್ನ ಶಾಸಕ ಎಸ್.ವಿ. ರಾಮಚಂದ್ರ ದೇವರ ದರ್ಶನ ಪಡೆದರು. ನಂತರ ಮಾತನಾಡಿ ದ ಅವರು ಕೋವಿಡ್ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಕಾಪಾಡಿ ಮಾಸ್ಕ್ ಧರಿಸಿ ಪ್ರತಿಯೊಬ್ಬರೂ ಜಾಗೃತರಾಗಿರಿ. ತಾಲ್ಲೂಕಿನಲ್ಲಿ ಉತ್ತಮ ಮಳೆ ಬೆಳೆಯಾಗಿ ಸಮೃದ್ಧಿಯ ನಾಡಾಗಲೀ ಜನತೆಗೆ ಉತ್ತಮ ಆರೋಗ್ಯ ಆಯುಷ್ಯ ನೀಡಲಿ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷ ಸದಾಶಿವಪ್ಪ ಮತ್ತು ಸದಸ್ಯರು, ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು.



## ಗ್ರಾಮ ಪಂಚಾಯ್ತಿ ಚುನಾವಣೆ : ಶೇ. 86.67ರಷ್ಟು ಮತದಾನ

ದಾವಣಗೆರೆ, ಮಾ.29- ತಾಲ್ಲೂಕಿನ ಮೂರು ಗ್ರಾಮ ಪಂಚಾಯ್ತಿಗಳ ಚುನಾವಣೆ ಸೋಮವಾರ ಶಾಂತಯುತವಾಗಿ ನಡೆದಿದ್ದು, ಶೇ 86.67ರಷ್ಟು ಮತದಾನವಾಗಿದೆ.

ಮುಂಜಾನೆಯಿಂದಲೇ ಹಳ್ಳಿಗಳಲ್ಲಿ ಮತದಾನ ಬಿರುಸಿನಿಂದ ಸಾಗಿತ್ತು. ಯುವಕರು, ಮಹಿಳೆಯರು, ಪುರುಷರು, ವೃದ್ಧರು ಅತ್ಯುತ್ಸಾಹದಿಂದ ಮತದಾನದಲ್ಲಿ ಪಾಲ್ಗೊಂಡಿದ್ದರು.

ಬೇತೂರು, ಕನಗೊಂಡನಹಳ್ಳಿ, ಕುಕ್ಕುವಾಡ ಈ ಮೂರು ಪಂಚಾಯಿತಿಗಳಿಂದ 13687 ಮತದಾರರ ಪೈಕಿ 6108 ಪುರುಷರು ಹಾಗೂ 5755 ಮಹಿಳೆಯರು ಸೇರಿ ಒಟ್ಟು 11863 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಮೂರು ಗ್ರಾ.ಪಂ.ಗಳಿಗೆ ಬೆಳಿಗ್ಗೆ 9 ಗಂಟೆ ವೇಳೆಗೆ ಶೇ. 14.08 ರಷ್ಟು ಮತದಾನವಾಗಿತ್ತು. ಬೆಳಿಗ್ಗೆ 11 ಗಂಟೆಗೆ ಶೇ 27.65ರಷ್ಟು ಮತದಾನವಾದರೆ, ಮಧ್ಯಾಹ್ನ 1ಕ್ಕೆ ಶೇ. 50.52ರಷ್ಟು ಮತದಾನವಾಗಿತ್ತು.

ಬೇತೂರು ಗ್ರಾ.ಪಂ. ಕ್ಷೇತ್ರಕ್ಕೆ ನಡೆದ ಚುನಾವಣೆ ಪೈಕಿ ಬೇತೂರು ಗ್ರಾಮದ ಮೂರು ಮತ ಕೇಂದ್ರಗಳಲ್ಲಿ 3487 ಮತದಾರರ ಪೈಕಿ 1554 ಪುರುಷರು, 1509 ಮಹಿಳೆಯರು ಸೇರಿ ಒಟ್ಟು 3063 ಮತದಾರರು ಮತ ಚಲಾಯಿಸಿದ್ದಾರೆ.

ಬಿ.ಕಲಪನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ ಕೇಂದ್ರದಲ್ಲಿ 1290 ಮತದಾರರ ಪೈಕಿ 593 ಪುರುಷರು, 526 ಮಹಿಳೆಯರು ಸೇರಿ ಒಟ್ಟು 1119 ಮತದಾರರ ಮತ ಚಲಾಯಿಸಿದ್ದು, ಶೇ.86.74ರಷ್ಟು ಮತದಾನವಾಗಿದೆ. ಬಿ.ಚಿತ್ತಾನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ **(2ನೇ ಪುಟಕ್ಕೆ)**

## ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಶಿವಕುಮಾರ್ ಕುರ್ಕಿ ನಾಮಪತ್ರ



ದಾವಣಗೆರೆ, ಮಾ.29- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಶಿಕ್ಷಕ ಶಿವಕುಮಾರ ಕುರ್ಕಿ ಇಂದು ತಮ್ಮ ಬೆಂಬಲಿಗರೊಂದಿಗೆ ತಹಶೀಲ್ದಾರ್ ಕಚೇರಿಗೆ ತೆರಳಿ ಚುನಾವಣಾಧಿಕಾರಿಗಳಾದ ತಹಸೀಲ್ದಾರ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಜಿ.ಟಿ. ರವಿ, ಎಂ. ರಾಜಶೇಖರಯ್ಯ ಸಿರಿಗೆರೆ, ಜಿ.ಹೆಚ್. ಶಿವಮೂರ್ತಿ ಗೋಣಿವಾಡ, ಗುರುಸ್ವಾಮಿ ಬಿಸ್ತುವಳ್ಳಿ, ಶಿವಕುಮಾರಸ್ವಾಮಿ ಆನೆಕೊಂಡ, ರೇವಣಸಿದ್ದಯ್ಯ ಅಗಸಕಟ್ಟೆ, ಟಿ.ಎಸ್. ರಾಘವೇಂದ್ರ, ಹೆಚ್. ಕಲ್ಲನಗೌಡ ಬಿಸ್ತುವಳ್ಳಿ, ಬಿ.ಸಿ. ಮಂಜುನಾಥ, ಹೆಚ್.ಕೆ. ರಾಜು, ಶಿವಬಸವಾರಾಧ್ಯ ಸ್ವಾಮಿ, ಎಂ. ಆರ್. ಮಂಜುಳಾ ಕುರ್ಕಿ, ಸ್ವರ್ಣ ಗೌರಿ ಇದ್ದರು.

**ಕನ್ನಡದ ಸೇವೆ ವಿಕೇಂದ್ರೀಕರಣಕ್ಕೆ ಒತ್ತು:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕೇವಲ ಸಮ್ಮೇಳನ ಮತ್ತು ದತ್ತಿನಿಧಿಗಳ ಸ್ಥಾಪನೆಗೆ ಸೀಮಿತವಾಗಿದೆ. ಆದರೆ, ಕನ್ನಡಿಗರನ್ನು ಕರೆ ತರುವ ಕೆಲಸ ಮಾಡಿಲ್ಲ. ಕೇವಲ ಜಿಲ್ಲಾ, ತಾಲ್ಲೂಕು ಪ್ರದೇಶ ಗಳಿಗೆ ಸೀಮಿತವಾಗಿದ್ದು, **(2ನೇ ಪುಟಕ್ಕೆ)**

## ಚುನಾವಣೆ ಎದುರಾದರೂ ವಾಮದೇವಪ್ಪ ಗೆಲುವು ಶತ ಸಿದ್ಧ



ದಾವಣಗೆರೆ, ಮಾ.29- ಜಿಲ್ಲೆಯಾದ್ಯಂತ ಕನ್ನಡ ಕಟ್ಟುವ ಕೆಲಸದ ಮುಖೇನ ಕನ್ನಡದ ತೇರನ್ನು ಯಶಸ್ವಿಯಾಗಿ ಎಳೆದಿರುವ ಹಾಗೂ ಜಿಲ್ಲಾ ಕಸಾಪದ ಏಳಿಗೆಗೆ ಶ್ರಮಿಸಿ, ಅಧ್ಯಕ್ಷ ಸ್ಥಾನಕ್ಕೆ ಅರ್ಹರಾಗಿರುವ ಬಿ. ವಾಮದೇವಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಬಹುದಾಗಿತ್ತು. ಚುನಾವಣೆ ಅವಶ್ಯವಿರಲಿಲ್ಲ ಎಂದು ವಾಮದೇವಪ್ಪ ಅವರ ಗುರು - ಹಿರಿಯರು, ಬೆಂಬಲಿಗ ಕನ್ನಡಾಭಿಮಾನಿಗಳು ಅಭಿಮಾನದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಲ್ಲದೇ, ಚುನಾವಣೆ ಎದುರಿಸುವ ಪರಿಸ್ಥಿತಿ ಇದ್ದರೂ ಸಹ ಅದರಲ್ಲಿ ಅವರ ಗೆಲುವು ಶತ ಸಿದ್ಧ ಎಂಬುದಾಗಿ ವಿಶ್ವಾಸ ಅಭಿವ್ಯಕ್ತಪಡಿಸಿದ್ದಾರೆ.

ನಗರದ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಇಂದು ಜಿಲ್ಲಾ ಕಸಪಾ ಸ್ಥಾನದ ಸೇವಾಕಾಂಕ್ಷಿಯಾದ ಬಿ. ವಾಮದೇವಪ್ಪ ಅವರ ಬೆಂಬಲಿಗರ, ಸ್ನೇಹಿತರ ಸಭೆಯಲ್ಲಿ ವಾಮದೇವಪ್ಪ ಅವರ ಕನ್ನಡ ಸೇವೆ ಬಗ್ಗೆ ಗುರು-ಹಿರಿಯರು, ಬೆಂಬಲಿಗ ಕನ್ನಡಾಭಿಮಾನಿಗಳು ಗುಣ
ಗಾನ ಮಾಡಿ, ಅಧ್ಯಕ್ಷರಾಗಿ ಆಯ್ಕೆಯಾಗಲೆಂಬ ಅಭಿಲಾಷೆಯೊಂದಿಗೆ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ. ಎಸ್.ಬಿ. ರಂಗನಾಥ, ಬಿ. ವಾಮದೇವಪ್ಪ ಅವರು ಕಳೆದ ಮೂರು ದಶಕಗಳಿಂದಲೂ ತಾಯಿ ಕನ್ನಡ ಭುವನೇಶ್ವರಿ ರಥವನ್ನು ಕೇವಲ ನಗರ ಪ್ರದೇಶಕ್ಕಷ್ಟೇ ಸೀಮಿತಗೊಳಿಸದೇ ದಾವಣಗೆರೆಯ ಗ್ರಾಮೀಣ ಪ್ರದೇಶದ ಹಳ್ಳಿ ಹಳ್ಳಿಗೂ ಎಳೆದೊಯ್ದ ಕೀರ್ತಿ

### ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಬಿ. ವಾಮದೇವಪ್ಪ ನಾಮಪತ್ರ ಸಲ್ಲಿಕೆ ನಂತರದ ಸಭೆಯಲ್ಲಿ ಬೆಂಬಲಿಗರ ವಿಶ್ವಾಸ

ಇವರದ್ದಾಗಿದೆ. ಗುಣಮಟ್ಟದ ಕನ್ನಡ ಸೇವೆ ಮಾಡಿದ್ದಾರೆ. ಅವರನ್ನು ಅವಿರೋಧವಾಗಿ ಆಯ್ಕೆ ಮಾಡ
ಬಹುದಿತ್ತು. ಆದರೆ ಅವರು ಮಾಡಿರುವ ಕನ್ನಡ ಸೇವೆಯೇ ಚುನಾವಣೆಯಲ್ಲಿ ಬಹುಮತದಿಂದ ಗೆಲ್ಲಿಸಲಿದೆ ಎಂದು ಹೇಳಿದರು.

ಬಿ. ವಾಮದೇವಪ್ಪ ಮಾತನಾಡಿ, ಹಲವು ವರ್ಷಗಳಿಂದ ಕನ್ನಡ ಸೇವೆ ಮಾಡುತ್ತಿದ್ದೇನೆ. ಸಮ್ಮೇಳನಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇನೆ. ಅಲ್ಲದೇ ದತ್ತಿನಿಧಿ ಹೆಚ್ಚು ಸ್ಥಾಪಿಸುವಲ್ಲಿ ಶ್ರಮಿಸಿದ್ದೇನೆ. 2016ರಲ್ಲಿ ಕೇವಲ ನಾಲ್ಕು ತಿಂಗಳಿನಲ್ಲಿ ಮೂರು ಸಾವಿರ **(2ನೇ ಪುಟಕ್ಕೆ)**

# ಚುನಾವಣೆ ಎದುರಾದರೂ ಗೆಲುವು ಶತ ಸಿದ್ಧ

**(1ನೇ ಪುಟದಿಂದ)** ಆಜೀವ ಸದಸ್ಯರನ್ನಾಗಿಸಿದ್ದೇನೆ. ಕನ್ನಡ ಭವನ ಅಭಿವೃದ್ಧಿಯಲ್ಲಿ ನನ್ನ ಪಾತ್ರ ಇದೆ ಎಂದ ಅವರು, ಮತದಾರರಲ್ಲಿ ಉತ್ತಮ ಅಭಿಪ್ರಾಯವಿದೆ ಎಂದು ತಿಳಿಸಿದರು.

ಈ ಚುನಾವಣೆಯಲ್ಲಿ ಆಯ್ಕೆಗೊಂಡಲ್ಲಿ ಪ್ರತಿ ಗ್ರಾಮದಲ್ಲೂ ಕನ್ನಡ ಧ್ವಜ ಸ್ತಂಬ ಸ್ಥಾಪನೆ, ಕುವೆಂಪು ಕನ್ನಡ ಭವನದಲ್ಲಿನ ಗ್ರಂಥಾಲಯದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳ ಸಂಖ್ಯೆ ಹೆಚ್ಚಿಸಿ, ಅದನ್ನು ಮನೆಯಲ್ಲಿ ಓದುವಂತಹ ವ್ಯವಸ್ಥೆ ಮಾಡುತ್ತೇನೆ. ಕನ್ನಡದ ತೇರನ್ನು ಮತ್ತಷ್ಟು ಉತ್ತಮವಾಗಿ ಸಾಗಿಸುವಂತಹ ಪ್ರಯತ್ನದ ಜೊತೆಗೆ ಕನ್ನಡ ಸೇವೆ ಮಾಡುವ ಆಸಕ್ತಿವುಳ್ಳವರಿಗೆ ಅವಕಾಶ ಕಲ್ಪಿಸುತ್ತೇನೆ ಎಂದರು.

ಸಭೆಯಲ್ಲಿ ಹಿರಿಯ ಸಾಹಿತಿ ಎಸ್.ಟಿ. ಶಾಂತಗಂಗಾಧರ್, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಬಿ.ಎಂ. ಸದಾಶಿವಪ್ಪ ಶ್ಯಾಗಲೆ, ವಿಶ್ರಾಂತ ಉಪನ್ಯಾಸಕರಾದ ಸುಭಾಸ್ ಚಂದ್ರ ಭೋಸ್, ಸಾಹಿತಿ ಎಂ.ಕೆ.ಬಕ್ಕಪ್ಪ, ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ, ಉಪನ್ಯಾಸಕಿ ಸುಮತಿ ಜಯಪ್ಪ, ಬಸವಾಪಟ್ಟಣ ಎನ್.ವಿ.ರಮೇಶ್, ಸಾಲಿಗ್ರಾಮ ಗಣೇಶ ಶೆಣೈ, ಹೊನ್ನಾಳಿ ಮುರಿಗೆಪ್ಪ ಗೌಡ, ಸಂತೆಬೆನ್ನೂರು ಕೆ. ಸಿರಾಜ್ ಅಹಮದ್, ಮಲ್ಯಾಡಿ ಪ್ರಭಾಕರ ಶೆಟ್ಟಿ, ಉಪ್ಪುಂದ ಕುಶಾಲ್ ಶೆಟ್ಟಿ, ಎಲ್. ನಾಗರಾಜ್, ಎಮ್.ಡಿ. ನೀಲಗಿರಿಯಪ್ಪ, ಕಿರಣ್ ಕುಮಾರ್ ಸಂತೆಬೆನ್ನೂರು, ವೀರೇಶ್ ಪ್ರಸಾದ್, ಗೋವಿಂದಪ್ಪ ಹೊನ್ನಾಳಿ, ಕೆ. ರಾಘವೇಂದ್ರ ನಾಯರಿ, ಸಿ.ಜಿ. ಜಗದೀಶ್ ಕೂಲಂಬಿ, ಇ.ಎಂ. ಮಂಜುನಾಥ, ಮುರುಗೇಶ್ ಹೆದ್ನೆ, ತಾರೇಶ್, ಹೆಚ್. ಜಯಣ್ಣ, ಕಾಕನೂರು ಎಮ್.ಬಿ. ನಾಗರಾಜ್, ಕೊರಟಗೆರೆ ಡಿ.ಎಮ್. ಶಿವಕುಮಾರ್, ಬಸವಾಪಟ್ಟಣ ಎಲ್.ಜಿ. ಮಧುಕುಮಾರ್, ಕೆ.ಹೆಚ್.ಮಂಜುನಾಥ್, ಕೆ.ಚಂದ್ರಣ್ಣ, ಬೇತೂರು ಷಡಾಕ್ಷರಪ್ಪ, ಗೋಪನಾಳ್ ಪಾಲಾಕ್ಷಪ್ಪ, ಬಿ.ಎಸ್. ಜಗದೀಶ್, ಏಜಾಜ್ ಅಹಮದ್, ಎಸ್.ಹೆಚ್. ಚಂದ್ರಪ್ಪ, ಪಲ್ಲಾಗಟ್ಟೆ ಶೇಖರಪ್ಪ ಸೇರಿದಂತೆ ಜಿಲ್ಲೆಯ ಕಸಾಪ ಆಜೀವ ಸದಸ್ಯರು ಇದ್ದರು.

**ನಾಮಪತ್ರ ಸಲ್ಲಿಕೆ:** ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಚುನಾವಣೆ ಮೇ 9 ರಂದು ನಡೆಯಲಿದ್ದು, ನಾಮಪತ್ರ ಸಲ್ಲಿಕೆಯ ಮೊದಲ ದಿನವಾದ ಇಂದು ಬಿ. ವಾಮದೇವಪ್ಪ ಅವರು ಚುನಾವಣಾಧಿಕಾರಿಗಳಾದ ತಹಸೀಲ್ದಾರ್ ಅವರಿಗೆ ನಾಮಪತ್ರ ಸಲ್ಲಿಸಿದರು. ನಂತರ ಮೆರವಣಿಗೆ ನಡೆಸಿದರು.

### ಕಸಾಪ ಸರಿದಾರಿಗೆ ತರುವ ನಿಟ್ಟಿನಲ್ಲಿ ಸ್ಪರ್ಧೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕನ್ನಡಿಗರ ಸ್ನೇಹಿ ಆಗಬೇಕಿದೆ. ಈಗಾಗಲೇ ಅಡ್ಡ ದಾರಿಯಲ್ಲಿರುವ ಜಿಲ್ಲಾ ಕಸಾಪವನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪರಿಷತ್‌ನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ, ನಾಮಪತ್ರ ಸಲ್ಲಿಸಿದ್ದೇನೆ. ನನ್ನನ್ನು ಸಾಹಿತ್ಯ ಪರಿಷತ್‌ಗೆ ಅವಿರೋಧವಾಗಿ ಆಯ್ಕೆ ಮಾಡಬಹುದಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ನನಗೆ ಇದು ಸುವರ್ಣಾವಕಾಶ. ಮತದಾರರ ಅಭಿಪ್ರಾಯ ಅಂತಿಮವಾಗಿದೆ. ಹೀಗಾಗಿ, ತಮ್ಮ ಅಮೂಲ್ಯ ಮತವೇ ನನಗೆ ಶ್ರೀರಕ್ಷೆಯಾಗಿದೆ.

- ಬಿ. ವಾಮದೇವಪ್ಪ

# ಗ್ರಾ.ಪಂ. ಚುನಾವಣೆ : 86.67ರಷ್ಟು ಮತದಾನ



ಕನಗೊಂಡನಹಳ್ಳಿ ಗ್ರಾಮದ ಮತಕೇಂದ್ರದಲ್ಲಿ ಮತದಾನ ಮಾಡಲು ಸಾಲುಗಟ್ಟಿ ನಿಂತ ಮತದಾರರು

**(1ನೇ ಪುಟದಿಂದ)** ಶಾಲೆ ಮತಗಟ್ಟೆಯಲ್ಲಿ 870 ಮತದಾರರ ಪೈಕಿ 415 ಮಹಿಳೆಯರು, 377 ಪುರುಷರು ಸೇರಿ 792 ಮತದಾರರು ಮತ ಚಲಾಯಿಸಿದ್ದಾರೆ. ಶೇ.91.03ರಷ್ಟು ಮತದಾನವಾಗಿದೆ.

ಕನಗೊಂಡನಹಳ್ಳಿ ಗ್ರಾಮ ಪಂಚಾಯ್ತಿಗೆ ನಡೆದ ಚುನಾವಣೆಯಲ್ಲಿ ಕನಗೊಂಡನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ 1022 ಮತದಾರರ ಪೈಕಿ 501 ಪುರುಷರು, 464 ಮಹಿಳೆಯರು ಸೇರಿ ಒಟ್ಟು 965 ಮತದಾರರು ಮತ ಚಲಾಯಿಸಿದ್ದು, ಶೇ.94.42ರಷ್ಟು ಮತದಾನವಾಗಿದೆ.

ಕೋಳೇನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತ ಕೇಂದ್ರದಲ್ಲಿ 1217 ಮತ ದಾರರ ಪೈಕಿ 515 ಪುರುಷರು, 460 ಮಹಿಳೆಯರು ಸೇರಿ 975 ಮತಗಳು ಚಲಾವಣೆಯಾಗಿವೆ. ಜಡಗನಹಳ್ಳಿ ಶಾಲೆಯಲ್ಲಿ 403 ಮತದಾರರ ಪೈಕಿ 194 ಪುರುಷರು, 199 ಮಹಿಳೆಯರು ಸೇರಿ ಒಟ್ಟು 393 ಮತ ಚಲಾವಣೆಯಾಗಿವೆ. ಅತಿ ಹೆಚ್ಚು ಅಂದರೆ ಶೇ.97.52ರಷ್ಟು ಮತದಾನವಾಗಿದೆ. ಬಲ್ಲೂರು ಸ.ಹಿ.ಪ್ರಾ. ಶಾಲೆಯಲ್ಲಿ 1259 ಮತದಾರರ ಪೈಕಿ 594 ಪುರುಷರು, 540 ಮಹಿಳೆಯರು ಸೇರಿ 1089 ಮತದಾರರು ಮತದಾನ ಮಾಡಿದ್ದಾರೆ. ಶೇ.86.50ರಷ್ಟು ಮತದಾನವಾಗಿದೆ.

ಕುಕ್ಕುವಾಡ ಗ್ರಾ.ಪಂ ಚುನಾವಣೆ ಯಲ್ಲಿ ಕುಕ್ಕುವಾಡ ಗ್ರಾಮದ ಮೂರು ಮತ ಗಟ್ಟೆಗಳಲ್ಲಿ 2279 ಮತದಾರರ ಪೈಕಿ, 949 ಪುರುಷರು, 876 ಮಹಿಳೆಯರು ಸೇರಿದಂತೆ ಒಟ್ಟು 1825 ಮತದಾರರು ಮತ ಚಲಾಯಿಸಿದ್ದಾರೆ.

ನಾಗರಸನಹಳ್ಳಿ ಸ.ಹಿ.ಪ್ರಾ ಶಾಲೆಯ ಮತ ಕೇಂದ್ರದಲ್ಲಿ 779 ಮತದಾರರ ಪೈಕಿ 356 ಪುರುಷರು, 339 ಮಹಿಳೆಯರು ಸೇರಿ 695 ಮತದಾರರು ಮತದಾನ ಮಾಡಿದ್ದಾರೆ. 89.22 ರಷ್ಟು ಮತದಾನವಾಗಿದೆ. ಸ.ಹಿ.ಪ್ರಾ. ಶಾಲೆ ಹೊನ್ನಮರಡಿ ಸ.ಹಿ.ಪ್ರಾ. ಶಾಲೆ ಮತ ಕೇಂದ್ರದಲ್ಲಿ 384 ಮತದಾರರ ಪೈಕಿ 192 ಪುರುಷರು, 167 ಮಹಿಳೆಯರು ಸೇರಿ 359 ಜನರು ಮತದಾನ ಮಾಡಿದ್ದಾರೆ. ಶೇ.93.49ರಷ್ಟು ಮತದಾನವಾಗಿದೆ.

ಹೊನ್ನಮರಡಿಯ ಸ.ಹಿ.ಪ್ರಾ. ಶಾಲೆ ಆಂಜನೇಯ ನಗರದ ಮತ ಕೇಂದ್ರದಲ್ಲಿ 697 ಮತ ದಾರರ ಪೈಕಿ 297 ಪುರುಷರು, 298 ಮಹಿಳೆಯರು ಸೇರಿ ಒಟ್ಟು 588 ಮತ ಚಲಾವಣೆಯಾಗಿವೆ. ಶೇ.84.36ರಷ್ಟು ಮತದಾನವಾಗಿದೆ.

ಹೊನ್ನಾಳಿ ತಾಲ್ಲೂಕಿನ ಅರಬಗಟ್ಟೆಯಲ್ಲಿ ಖಾಲಿಯಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶೇ.83.79ರಷ್ಟು ಮತದಾನವಾಗಿದೆ. 1049 ಮತದಾರರ ಪೈಕಿ 456 ಪುರುಷರು, 423 ಮಹಿಳೆಯರು ಸೇರಿ ಒಟ್ಟು 879 ಮತದಾರರು ಮತದಾನ ಮಾಡಿದ್ದಾರೆ.

### ಮಾಯಕೊಂಡದಲ್ಲಿ ನಡೆಯದ ಚುನಾವಣೆ

ಮಾಯಕೊಂಡವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬ ಬೇಡಿಕೆ ಇಟ್ಟುಕೊಂಡು ಗ್ರಾಮಸ್ಥರು ಗ್ರಾ.ಪಂ ಚುನಾವಣೆ ಬಹಿಷ್ಕರಿಸಿದ್ದ ಹಿನ್ನೆಲೆಯಲ್ಲಿ ಚುನಾವಣೆ ನಡೆದಿಲ್ಲ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಎಸ್. ವೆಂಕಟೇಶ್, ಮಾಯಕೊಂಡವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬುದು ನಮ್ಮ ಬಹು ವರ್ಷದ ಬೇಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಜನಪ್ರತಿನಿಧಿಗಳು, ಅಧಿಕಾರಿಗಳು ಸ್ಪಂದಿಸದ ಕಾರಣ ಗ್ರಾ.ಪಂ. ಚುನಾವಣೆ ಬಹಿಷ್ಕರಿಸುವ ನಿರ್ಧಾರವನ್ನು ಗ್ರಾಮಸ್ಥರು ಮಾಡಿದ್ದಾರೆ ಎಂದರು.

ನಮ್ಮ ಬೇಡಿಕೆ ಈಡೇರದಿದ್ದರೆ ಮುಂದಿನ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಸೇರಿದಂತೆ ಎಲ್ಲಾ ಚುನಾವಣೆಗಳನ್ನೂ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿರುವುದಾಗಿ ಅವರು ಹೇಳಿದರು.

ಖಜಾನೆ ಕಚೇರಿ, ನಾಡ ಕಚೇರಿ, ರೈಲು ನಿಲ್ದಾಣ, ಪೊಲೀಸ್ ಠಾಣೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೀಗೆ ಎಲ್ಲಾ ಸೌಲಭ್ಯ ಹೊಂದಿರುವ ಮಾಯಕೊಂಡ ತಾಲ್ಲೂಕು ಕೇಂದ್ರವಾಗುವ ಎಲ್ಲಾ ಅರ್ಹತೆ ಪಡೆದಿದೆ. ಆದರೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ನಮ್ಮ ಬೇಡಿಕೆ ಈಡೇರಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.


## ಮೊದಲನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಬಸವಲಿಂಗಮ್ಮ**
ದಿ. ಅಂಗಡಿ ಮಹೇಶ್ವರಪ್ಪ
ಇವರ ಧರ್ಮಪತ್ನಿ
ನಿಧನ - 30.03.2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸವಿ ನೆನಪಿನಲ್ಲಿರುವ...

ಮಕ್ಕಳಾದ : ಕೆ.ಎಂ. ಮಂಜುನಾಥ್, ಎ.ಎಂ. ಚಂದ್ರಪ್ಪ ಎ.ಎಂ. ರುದ್ರೇಶ್, ಎ.ಎಂ. ಕುಬೇರಪ್ಪ, ಕೆ.ಎಂ. ಪ್ರಕಾಶ್, ಶ್ರೀಮತಿ ಶಾರದಮ್ಮ, ಶ್ರೀಮತಿ ಶಿವಮ್ಮ, ಶ್ರೀಮತಿ ಜಯಮ್ಮ ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಂಗಡಿ ವಂಶಸ್ಥರು, ಕೋಲ್ಕುಂಟೆ, ದಾವಣಗೆರೆ ತಾಲ್ಲೂಕು



# ಉತ್ಸವಾಂಬ ದೇವಿ ಸೀರೆ ಹರಾಜು

ಹರಪನಹಳ್ಳಿ, ಮಾ.29- ತಾಲ್ಲೂಕಿನ ಉಚ್ಚಂಗಿದುರ್ಗದ ಇತಿಹಾಸ ಪ್ರಸಿದ್ಧ ಉತ್ಸವಾಂಬ ದೇವಸ್ಥಾನದಲ್ಲಿ ಭಕ್ತರು ಹರಕೆ, ಕಾಣಿಕೆ ರೂಪದಲ್ಲಿ ನೀಡಿರುವ ವಿವಿಧ ಮಾದರಿಯ ಗುಣ ಮಟ್ಟದ ಸೀರೆಗಳನ್ನು ನಾಡಿದ್ದು ದಿನಾಂಕ 31 ರಂದು ಬಹಿರಂಗ ಹರಾಜು ಮಾಡಲಾಗುವುದು.

ಈ ಕುರಿತು ಹೇಳಿಕೆ ನೀಡಿರುವ ಉತ್ಸವಾಂಬ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಪ್ಪ, ಅಂದು ಬೆಳಿಗ್ಗೆ 11 ಗಂಟೆಗೆ ದೇವಾಲಯದ ಆವರಣದಲ್ಲಿ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಬಳ್ಳಾರಿ ಜಿಲ್ಲಾ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತದೆ ಎಂದು ತಿಳಿಸಿದ್ದಾರೆ.

ಹಸಿರು ಪೀನ್, ಕಂಚಿ ಪಾಲಿಸ್ಟರ್, ಹಸಿರು ಪಾಲಿಸ್ಟರ್, ಮಾಂಗಲ್ಯ ಬಾರ್ಡರ್, ಹೂವಿನ ಕಲರ್, ಕಲರ್ ಪಾಲಿಸ್ಟರ್, ಮಿಂಚು ದಟ್ಟಿ, ಕಂಚಿ ಕಾಟನ್, ಬಾಹುಬಲಿ ಸೀರೆಗಳು ಹಾಗೂ ರವಿಕೆ ಕಣಗಳ ಹರಾಜು ನಡೆಯಲಿದೆ. ಹರಾಜು ಆರಂಭವಾಗುವುದಕ್ಕಿಂತ ಪೂರ್ವದಲ್ಲಿ 10 ಸಾವಿರ ಠೇವಣಿ ಹಣ ಪಾವತಿಸಬೇಕು ಎಂಬುದು ಸೇರಿದಂತೆ 7 ಷರತ್ತುಗಳು ಒಳಗೊಂಡಿರುತ್ತವೆ ಎಂದು ಅವರು ಹೇಳಿದ್ದಾರೆ.


## ಪುಣ್ಯಸ್ಮರಣೆ



ದಿ|| ಶ್ರೀಮತಿ ಕಚವಿ ಲಕ್ಷ್ಮಮ್ಮ ನಾಗಪ್ಪ ವಿಠಲ್‌ಕರ್

ಅಮ್ಮ ನೀವು ನಮ್ಮನ್ನಗಲಿ ಇಂದಿಗೆ 38 ವರ್ಷಗಳಾದವು. ನಿಮ್ಮಲ್ಲಿರುವ ಸಹನೆ, ತಾಳ್ಮೆ, ಪ್ರೀತಿ ನಮಗೆ ದಾರಿದೀಪವಾಗಿವೆ. ನಿಮ್ಮ ಮಾರ್ಗದರ್ಶನದಂತೆಯೇ ನಡೆಯುತ್ತಿದ್ದೇವೆ. ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ.

ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು, ಕಚವಿ ಶಂಕರ್ ನಾಗಪ್ಪ ವಿಠಲ್‌ಕರ್ ಮತ್ತು ಸಹೋದರರು
ಶ್ರೀ ಅಮೃತೇಶ್ವರಿ ಜ್ಯುಯಲರ್ಸ್, ಮಂಡಿಪೇಟೆ.
ಶ್ರೀ ವೆಂಕಟೇಶ್ವರ ಜ್ಯುಯಲರಿ ಮಾರ್ಟ್, ಚೌಕಿಪೇಟೆ.
ಶ್ರೀ ಮಾರುತಿ ಜ್ಯುಯಲರ್ಸ್,ಚೌಕಿಪೇಟೆ, ದಾವಣಗೆರೆ.



|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ನಗರ ವಾಸಿ ಉಳುಪಿನಕಟ್ಟೆ ದಿ.ಶ್ರೀಮತಿ ಬಸಮ್ಮ ಹಾಗೂ ದಿ. ಕಡ್ಲಪ್ಪಳ ಸಿದ್ದಪ್ಪನವರ ಮಗ ಡಾ|| ಹೆಚ್.ಎಸ್. ಜಯಪ್ಪ, ನಿವೃತ್ತ ಪ್ರಾಧ್ಯಾಪಕರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 23.03.2021 ನೇ ಮಂಗಳವಾರ ಸಾಯಂಕಾಲ 5.40 ಗಂಟೆಗೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಸುಧಾಮಣಿ ಡಿ.ಎಸ್.**
(ನಿವೃತ್ತ ಉಪನ್ಯಾಸಕಿ)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 31.03.2021 ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ, 1249/15, 2ನೇ ಮೇನ್, ಮಾಗನೂರು ಬಸಪ್ಪ ಶಾಲೆ ಹತ್ತಿರ, ತರಳಬಾಳು ಬಡಾವಣೆ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಡಾ|| ಹೆಚ್.ಎಸ್. ಜಯಪ್ಪ, ನಿವೃತ್ತ ಪ್ರಾಧ್ಯಾಪಕರು
ಶ್ರೀಮತಿ ಶಮಾ ಜೆ., ಶ್ರೀ ಎಂ.ಆರ್. ಪ್ರದೀಪ್‌ಕುಮಾರ್
ಮೃತರ ಸಹೋದರರು ಮತ್ತು ಸಹೋದರಿಯರು, ಕಡ್ಲಪ್ಪಳ ವಂಶಸ್ಥರು ಹಾಗೂ ಬಂಧು-ಮಿತ್ರರು. 94489 29664, 88610 05268

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


# ಆತ್ಮೀಯತೆಯ ಹೋಳಿ

**(1ನೇ ಪುಟದಿಂದ)** ಮಾಡುತ್ತಿದ್ದುದು ಸಾಮಾನ್ಯವಾಗಿತ್ತು. ಕೊರೊನಾ ನಡುವೆಯೂ ಬಣ್ಣ ಹಾಗೂ ಮೊಟ್ಟೆಗಳ ಮಾರಾಟ ನಡೆದೇ ಇತ್ತು. ಹಲವಾರು ಶಾಲಾ - ಕಾಲೇಜುಗಳು ಎಂದಿನಂತೆ ಕಾರ್ಯ ನಿರ್ವಹಿಸಿದ ಕಾರಣ, ವಿದ್ಯಾರ್ಥಿಗಳು ಲಗುಬಗೆಯಿಂದ ಓಕುಳಿ ಮುಗಿಸಿಕೊಂಡು ಶಾಲೆ ಕಡೆ ಹೆಜ್ಜೆಹಾಕಿದ್ದು ಕಂಡು ಬಂತು.

ಕುಟುಂಬ ಹಾಗೂ ಗೆಳೆಯರಿಗೆ ಸೀಮಿತವಾಗಿ ಓಕುಳಿ ನಡೆದರೂ ಸಂಭ್ರಮಕ್ಕೆ ಕೊರತೆ ಇರಲಿಲ್ಲ. ಯಾವುದೇ ಅಬ್ಬರವಿಲ್ಲದೇ, ಆತ್ಮೀಯತೆ ಮೆರೆಸುವ ರೀತಿಯಲ್ಲಿ 2021ರ ಓಕುಳಿ ನೆರವೇರಿತು.

# ಜಲಶಕ್ತಿ ಅಭಿಯಾನಕ್ಕೆ ರಾಜ್ಯದಲ್ಲಿ ಚಾಲನೆ

**(1ನೇ ಪುಟದಿಂದ)** ಸಿಲುಕಿದ್ದಾರೆ. ಇದನ್ನು ತಪ್ಪಿಸಲು ಪ್ರಧಾನಿ ಮೋದಿ ಅವರು, ಕ್ಯಾಚ್ ದಿ ರೈನ್ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ರಾಜ್ಯದಲ್ಲೂ ಇದೇ 22 ರಿಂದ ಅಭಿಯಾನ ಆರಂಭವಾಗಿದ್ದು, ಮುಂದಿನ ನವೆಂಬರ್ ಅಂತ್ಯದವರೆಗೂ ನಡೆಯಲಿದೆ ಎಂದರು.

ಅಭಿಯಾನದಡಿ ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿ, ಕೆರೆ ನೀರು ಹರಿದುಬರುವ ಕಾಲುವೆಗಳ ಪುನಶ್ಚೇತನ, ಕೆರೆಯಲ್ಲಿ ಹೂಳು ತೆಗೆಯುವುದು, ಕೆರೆ ಏರಿ ದುರಸ್ತಿ ಮಾಡಿ ಇಳಿಜಾರುಗಳಲ್ಲಿ ಗಿಡ ನೆಡುವುದು, ರೈತರ ಜಮೀನಿನಲ್ಲಿ ಬದು ನಿರ್ಮಾಣ, ಪ್ರತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಲ್ಯಾಣ ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ನಾಲಾ ಪುನಶ್ಚೇತನ, ಗೋಕಟ್ಟೆ ನಿರ್ಮಾಣ, ಕೆರೆ ನಿರ್ಮಾಣ, ಬೋರ್‌ವೆಲ್ ರೀಚಾರ್ಜ್, ಮಳೆ ನೀರು ಕೊಯ್ಲು, ಅರಣ್ಯೀಕರಣ ಕಾಮಗಾರಿ, ನೆಡುತೋಪು ಮತ್ತಿತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ನರೇಗಾ ಯೋಜನೆಯಡಿ ಜಲ ಸಂರಕ್ಷಣೆ ಕಾಮಗಾರಿಗಳ ದುರಸ್ತಿ, ಚೆಕ್‌ಡ್ಯಾಂಗಳ ಹೂಳು ತೆಗೆಯುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಈ ಕಾರ್ಯ ನಡೆಯಲಿದೆ.

ಮಳೆ ನೀರು ಸಂಗ್ರಹಿಸಿ ಸದುಪಯೋಗಪಡಿಸಿಕೊಳ್ಳಲು ಸರ್ಕಾರಿ, ಖಾಸಗಿ ಆಸ್ತಿಗಳಲ್ಲದೆ ನಗರ ಪ್ರದೇಶಗಳಲ್ಲೂ ಯೋಜನೆ ರೂಪಿಸಲಾಗುತ್ತಿದೆ ಎಂದರು.

ರಾಜ್ಯ ಮಟ್ಟದ ಜಲಶಕ್ತಿ ಅಭಿಯಾನ (ಕ್ಯಾಚ್ ದಿ ರೈನ್) ಏಪ್ರಿಲ್ 9ರಂದು ಹುಬ್ಬಳ್ಳಿಯಲ್ಲಿ ನಡೆಯಲಿದೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಮಹೇಶ್ ಶರ್ಮ ಉದ್ಘಾಟನೆ ಮಾಡಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಸಚಿವ ಜಗದೀಶ್ ಶೆಟ್ಟರ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಈ ಕಾರ್ಯಕ್ರಮ ನಡೆಯಲಿದ್ದು ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಯಾವುದೇ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದ್ದು, ಅಗತ್ಯವಿರುವ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಸತತ ಮೂರು ವರ್ಷ ಬರ ಇರುವ ವಿಧಾನಸಭಾ ಕ್ಷೇತ್ರಗಳಿಗೆ 50 ಲಕ್ಷ ರೂ., ಎರಡು ವರ್ಷ ಬರ ಇರುವ ಕ್ಷೇತ್ರಗಳಿಗೆ 35 ಲಕ್ಷ ರೂ. ಮತ್ತು ಒಂದು ವರ್ಷದ ಬರವಿರುವ ಕ್ಷೇತ್ರಗಳಿಗೆ 25 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ ಎಂದು ವಿವರಿಸಿದರು.

# ಅಧ್ಯಕ್ಷ ಸ್ಥಾನಕ್ಕೆ ಶಿವಕುಮಾರ್ ಕುರ್ಕಿ ನಾಮಪತ್ರ

**(1ನೇ ಪುಟದಿಂದ)** ಗ್ರಾಮ ಮಟ್ಟದಲ್ಲಿ ಪರಿಷತ್ ಘಟಕ ಇಲ್ಲ ಎಂದು ಶಿವಕುಮಾರ್ ಕುರ್ಕಿ ತಿಳಿಸಿದ್ದಾರೆ. ಕನ್ನಡದ ಸೇವೆ ವಿಕೇಂದ್ರೀಕರಣ ಆಗಬೇಕಿದೆ. ಪ್ರತಿಯೊಬ್ಬ ಕನ್ನಡಿಗರು ಭಾವಹಿಸುವ ಕೆಲಸ ಮಾಡಬೇಕಿದೆ.

ಈ ನಿಟ್ಟಿನಲ್ಲಿ ಎಲ್ಲಾ ವರ್ಗದ ಜನರು, ಕಾರ್ಮಿಕರನ್ನು ಕನ್ನಡ ಸಾಹಿತ್ಯ ಪರಿಷತ್ ಗೆ ಕರೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗುವುದು. ಪರಿಷತ್‌ನ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ ಆಗಬೇಕಿತ್ತು. ಕನ್ನಡ ಸೇವೆ ಮಾಡಲು ಜನರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಹೀಗಾಗಿ, ನಾನು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆಂದರು.


## ಶ್ರೀಮತಿ ಶಾಂತಮ್ಮ ಡಾ|| ಬಸವನಗೌಡ ಬಿರಾದಾರ್ ನಿಧನ



ದಾವಣಗೆರೆ ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್ #118/C-26 ವಾಸಿ ಡಾ|| ವೀರೇಶ್ ಬಿರಾದರ್ ಅವರ ಮಾತೋಶ್ರೀಯವರಾದ **ಶ್ರೀಮತಿ ಶಾಂತಮ್ಮ ಬಿರಾದಾರ್** (74) ಅವರು ದಿನಾಂಕ 29.03.2021 ರ ಮಂಗಳವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಡಾ|| ವೀರೇಶ್ ಬಿರಾದಾರ್ ಸೇರಿದಂತೆ ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.03.2021 ರ ಮಧ್ಯಾಹ್ನ 1 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ : 88920 07561, 95356 10817



## ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಕೆ. ಪ್ರಕಾಶ್ ಇವರ ಧರ್ಮಪತ್ನಿಯಾದ

**ದಿ|| ಶ್ರೀಮತಿ ಎಂ.ಪಿ. ಜಯಶೀಲ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು...
ನಿಮ್ಮ ನೆನಪುಗಳೇ ನಮಗೆ ದಾರಿ ದೀಪವಾಗಿವೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಶ್ರೀ ಎಂ.ಕೆ. ಪ್ರಕಾಶ್
ಮಕ್ಕಳಾದ : ಕು|| ಮೇಘನ ಎಂ.ಪಿ., ಕು|| ಚೇತನ ಎಂ.ಪಿ.
**ಜೆ.ಪಿ. ಎಂಟರ್‌ಪ್ರೈಸಸ್ ಸಿಬ್ಬಂದಿ ವರ್ಗ**
ಹಾಗೂ ಬಂಧು-ಮಿತ್ರರು



|| ಶ್ರೀ ವಿಮಲೇಶ್ವರ ಪ್ರಸನ್ನ ||


## ಪ್ರಥಮ ವರ್ಷದ ಪುಣ್ಯಸ್ಮರಣೆ

*ದೈವಜ್ಞ ಬ್ರಾಹ್ಮಣರನ್ನು ಒಗ್ಗೂಡಿಸಿದ ಹೆಗ್ಗಳಿಕೆಗೆ ಪಾತ್ರರಾಗಿರುವ ಮತ್ತು ದೈವಜ್ಞ ಬ್ರಾಹ್ಮಣ ಮಠವನ್ನು ಸ್ಥಾಪನೆ ಮಾಡವಲ್ಲಿ ಶ್ರಮಿಸಿದವರಾದ*

**ಶ್ರೀ ಎಂ. ಮೋಹನ ದತ್ತಾತ್ರೇಯ ಶೇಟ್**

**ಅವರು, ದೈವಜ್ಞ ಬ್ರಾಹ್ಮಣ ಮಠ ಶ್ರೀ ಕ್ಷೇತ್ರ ಕರ್ಕಿ, ಹೊನ್ನಾವರ ತಾಲ್ಲೂಕು ಇದರ ಸಂಸ್ಥಾಪಕ ಕಾರ್ಯಾಧ್ಯಕ್ಷರಾಗಿ ಪುರಾತನ ದೈವಜ್ಞ ಬ್ರಾಹ್ಮಣರ ಕಾರಣಿಕ ನಾಗಕ್ಷೇತ್ರ ಕುಡುಂಬಿ ಹಿತ್ತಿಲು, ಮಂಗಳೂರು ಇದರ ಆಡಳಿತ ಮೊಕ್ತೇಸರರಾಗಿ**
ಸಮಾಜ ಸೇವಕರಾಗಿ, ಅಬಕಾರಿ ಉದ್ಯಮಿಗಳಾಗಿ, ಹೃದಯ ಶ್ರೀಮಂತಿಕೆಯಿಂದಲೇ ಬದುಕು ಸಾಗಿಸಿದ ನೀವು, ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ :

ಶ್ರೀಯುತರ ವರ್ಷಾಂತಿಕ ಕಾರ್ಯಕ್ರಮವನ್ನು 2021ರ ಏಪ್ರಿಲ್ 1ರಂದು ದ್ವಾರಕನಾಥ ಸಭಾ ಭವನ, ಬಸವನಗುಡಿ ಪೊಲೀಸ್ ಠಾಣೆ ಎದುರು, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲೆಯ ಸಮಸ್ತ ಸಮಾಜ ಬಾಂಧವರು ಭಾಗವಹಿಸಲು ವಿನಂತಿ.



ಶ್ರೀ ಎಂ. ಮೋಹನ ದತ್ತಾತ್ರೇಯ ಶೇಟ್
ಜನನ : 17-12-1940 ನಿಧನ : 14-03-2020

**ಸತ್ಯನಾರಾಯಣ ಆರ್. ರಾಯ್ಕರ್** ಅಧ್ಯಕ್ಷರು
**ವಿಠ್ಠಲ್ ಗಣಪತಿ ಭಟ್ ಅವಾಜಿ** ಕಾರ್ಯದರ್ಶಿ

**ನಿರ್ದೇಶಕರುಗಳು :**

- ಶಂಕರ್ ನಾಗಪ್ಪ ವಿಠ್ಠಲಕರ್
- ಸೀತಾರಾಮ್ ಎಂ. ಶೇಟ್
- ಉಮೇಶ್ ಎನ್. ಪುರುಷನ್
- ಮಾರುತಿ ಎನ್. ಕುರ್ಡೇಕರ್
- ಅಶೋಕ್ ಪಿ. ಜನ್ನು
- ರಾಜೇಶ್ ಪಿ. ರೇವಣಕರ್
- ರಾಘವೇಂದ್ರ ಎಸ್. ರೇವಣಕರ್
- ಪ್ರಕಾಶ್ ಎಲ್. ದೈವಜ್ಞ
- ಪ್ರಶಾಂತ್ ವಿ. ವೆರ್ಣೇಕರ್
- ಸುಬ್ರಮಣ್ಯ ಟಿ. ಕುರ್ಡೇಕರ್
- ಸುನಿಲ್ ಆರ್. ವೆರ್ಣೇಕರ್
- ಸತೀಶ್ ಜಿ. ರಾಯ್ಕರ್
- ಸತೀಶ್ ಎಸ್. ಸಾನು

ಮ್ಯಾನೇಜರ್ : **ಸೋಮಶೇಖರ್ ಕೆ.ಎಸ್.**

**ದೈವಜ್ಞ ಸಮಾಜ ಸಂಘ (ರಿ.) ದಾವಣಗೆರೆ.**


# 'ಕವಿಗೋಷ್ಠಿ' ರಾಜ್ಯ ಮಟ್ಟಕ್ಕೆ ವಿಸ್ತರಣೆ

ದಾವಣಗೆರೆ, ಮಾ.29- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಏ.11 ರಂದು ಬೆಳಿಗ್ಗೆ 10.35ಕ್ಕೆ ಜಿಲ್ಲಾ ಮಟ್ಟದ ಯುಗಾದಿ ಕವಿಗೋಷ್ಠಿಯನ್ನು ಹಮ್ಮಿಕೊಂಡಿದ್ದು, ಹೊರ ಜಿಲ್ಲೆಗಳಿಂದ ಅನೇಕ ಕವಿ-ಕವಯತ್ರಿಯರ ನಿರೀಕ್ಷೆಗೂ ಮೀರಿ ಕವನಗಳು ಹೆಸರು ನೋಂದಾಯಿಸಿರುವ ಕಾರಣ ರಾಜ್ಯ ಮಟ್ಟಕ್ಕೆ ವಿಸ್ತರಿಸಲಾಗಿದೆ ಎಂದು ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಆಸಕ್ತರು ಏಪ್ರಿಲ್ 5 ರೊಳಗೆ ತಮ್ಮ ಹೆಸರು ಊರು, ತಾಲ್ಲೂಕು ಮತ್ತು ಮೊಬೈಲ್ ಸಂಖ್ಯೆಯನ್ನು ಈ ವ್ಯಾಟ್ಸಾಪ್ ನಂಬರ್ 9538732777ಗೆ ನೋಂದಾಯಿಸಬಹುದು.

20 ರಿಂದ 25 ಸಾಲುಗಳಿಗೆ ಮೀರದಂತೆ ಯುಗಾದಿ ಹಬ್ಬದ ಕುರಿತು ಕವನ ಬರೆದು ವಾಚನ ಮಾಡಬಹುದಾಗಿದೆ. ಒಬ್ಬರಿಗೆ ಒಂದೇ ಕವನ ವಾಚನ ಮಾಡಲು ಅವಕಾಶವಿದೆ.

## ಕೆ.ಎನ್. ಹಳ್ಳಿಯಲ್ಲಿ ಯೋಗಿ ನಾರಾಯಣ ಜಯಂತಿ



ಮಲೇಬೆನ್ನೂರು, ಮಾ.29 - ಕಡಾರನಾಯ್ಕನಹಳ್ಳಿ ಗ್ರಾಮದಲ್ಲಿ ಬಲಿಜ ಸಮಾಜದ ವತಿಯಿಂದ ಶ್ರೀ ಗುರು ಯೋಗಿ ನಾರಾಯಣ ಯತೀಂದ್ರರ ಜಯಂತಿಯನ್ನು ಭಾನುವಾರ ಸರಳವಾಗಿ ಆಚರಿಸಲಾಯಿತು. ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್ ಸೇರಿದಂತೆ ಇನ್ನೂ ಅನೇಕ ಗಣ್ಯರು ಭಾಗವಹಿಸಿ, ಯೋಗಿ ನಾರಾಯಣ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದರು.

## ಜಂಗಮ ಸೌಹಾರ್ದ ಸಹಕಾರಿಯಲ್ಲಿ ರೇಣುಕಾಚಾರ್ಯರ ಜಯಂತಿ



ದಾವಣಗೆರೆ, ಮಾ.29- ಇಲ್ಲಿನ ಕೆಟಿಜೆ ನಗರದಲ್ಲಿರುವ ಜಂಗಮ ಸೌಹಾರ್ದ ಸಹಕಾರಿ ನಿಯಮಿತದಲ್ಲಿ ಶುಕ್ರವಾರ ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಕಾರಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಮಾಜಿ ಮತ್ತು ಹಾಲಿ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.


## ಮೀನುಗಾರರಿಗೆ ಬಲೆ, ತೆಪ್ಪ ವಿತರಣೆ



ಮಲೇಬೆನ್ನೂರು, ಮಾ.29- ಮೀನುಗಾರಿಕೆ ಇಲಾಖೆಯಿಂದ ಮಂಜೂರಾಗಿ ಬಂದಿರುವ ಮೀನು ಹಿಡಿಯುವ ಬಲೆ, ತೆಪ್ಪ ಹಾಗೂ ಇತರೆ ಸಲಕರಣೆಗಳನ್ನು ಶಾಸಕ ಎಸ್. ರಾಮಪ್ಪ ಅವರು ಶನಿವಾರ ಹರಿಹರ ತಾಲ್ಲೂಕಿನ ವಿವಿಧ ಹಳ್ಳಿಗಳ ಮೀನುಗಾರರಿಗೆ ವಿತರಣೆ ಮಾಡಿದರು. ಗಂಗಾಮತ ಸಮಾಜದ ಮುಖಂಡರಾದ ಕುಂಬಳೂರು ಬಸವರಾಜಪ್ಪ, ಗೋವಿನಹಾಳ್ ಚಂದ್ರಪ್ಪ ಸೇರಿದಂತೆ ಮತ್ತಿತರರು ಈ ವೇಳೆ ಹಾಜರಿದ್ದರು.

# ಮರು ಜನ್ಮ ನೀಡಿ... ಜೀವ ರಕ್ಷಕರಾದ ವೈದ್ಯರಿಗೊಂದು ನಮನ...

**ವೈದ್ಯೋ ನಾರಾಯಣೋ ಹರಿಃ**
**ಜೀವಕ್ಕೆ ಮರುಜೀವ ಕೊಡಬಲ್ಲ ಸಾಮರ್ಥ್ಯ ಪಡೆದ,**
**ರೋಗಿಗಳ ನಾಡಿ ಮಿಡಿತಕ್ಕೆ ಹೊಸ ಬಡಿತವ ಮಿಳಿತಗೊಳಿಸಲು**
**ಸೇವೆಗೆ ಕುಳಿತ, ಶ್ರೀ ಹರಿ ಸ್ವರೂಪಿ ವೈದ್ಯರಿಗೆಲ್ಲ...**
**ವೈದ್ಯರ ದಿನಾಚರಣೆಯ ಶುಭಾಶಯಗಳು.**



ಮಾರ್ಚ್ 30 ರಂದು ಪ್ರತಿ ವರ್ಷ ವಿಶ್ವ ವೈದ್ಯರ ದಿನಾಚರಣೆಯನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ತಂದೆ, ತಾಯಿ, ಬಂಧು-ಮಿತ್ರರು ಹೇಗೆ ಮುಖ್ಯವೋ ಹಾಗೇ ನಮ್ಮ ಜೀವಿತಾವಧಿಯ ಉದ್ದಕ್ಕೂ ವೈದ್ಯರ ಪಾತ್ರವು ಕೂಡ ಅಷ್ಟೇ ಪ್ರಮುಖ. ತಮ್ಮ ವೃತ್ತಿ ಜೀವನದ ಬಹು ಸಮಯವನ್ನು ರೋಗಿಗಳ ಆರೈಕೆಯಲ್ಲಿಯೇ ಕಳೆಯುತ್ತಾರೆ ಎಂದರೆ ಆ ವೃತ್ತಿಗೆ ಇರುವ ಮಹತ್ವವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಲೇಬೇಕು.

ವೈದ್ಯ ಎಂದರೆ ಕೇವಲ ರೋಗಕ್ಕೆ ತಕ್ಕ ಔಷಧಗಳನ್ನು ನೀಡಿ ಚಿಕಿತ್ಸೆ ಮಾಡುವವರಲ್ಲ, ಒಬ್ಬ ರೋಗಿಯ ಮಾನಸಿಕ, ಬೌದ್ಧಿಕ ಮನಸ್ಥಿತಿಯನ್ನು ಅರ್ಥೈಸಿಕೊಂಡು ಅವನ ನೋವುಗಳಿಗೆ ಪ್ರತಿಕ್ರಿಯಿ ಸುವ ನಿಜವಾದ ಸ್ನೇಹಿತ. ತಾಯಿಯಂತೆ ಮಕ್ಕಳ, ವೃದ್ಧರ, ಯುವಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಒಬ್ಬ ವೈದ್ಯ/ವೈದ್ಯೆ ತಾಯಿಯಾಗಿ, ಸ್ನೇಹಿತರಾಗಿ, ಪ್ರೀತಿ, ಮಮತೆಯಿಂದ ರೋಗಿಗಳ ಬಳಿ ಶಾಂತ ಸ್ವಭಾವದಿಂದ ವರ್ತಿಸುತ್ತಾರೆ. ಅವರ ಕಾಯಿಲೆಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಿ, ರೋಗಿಗೆ ಆತ್ಮಸ್ಥೈರ್ಯ ತುಂಬಿ ಜೀವನೋತ್ಸಾಹ ಉಕ್ಕಿಸುವ ವ್ಯಕ್ತಿ.

ಪ್ರತಿ ವೈದ್ಯರಿಗೆ ಪ್ರತಿಯೊಬ್ಬ ರೋಗಿಯ ಕಾಯಿಲೆ ಸವಾಲಿದ್ದಂತೆ. ಕಳೆದ ಇದೇ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾದ ಕೊರೊನಾ ವೈರಸ್‌ನಿಂದಾಗಿ ವೈದ್ಯರು ತಮ್ಮ ಇಡೀ ಸಮಯ ವನ್ನು ವೈರಸ್ ತಗುಲಿದ ಜನರಿಗೆ ಚಿಕಿತ್ಸೆ ನೀಡುವಲ್ಲಿ ಹಗಲು ರಾತ್ರಿಯನ್ನದೇ ತಮ್ಮ ಇಡೀ ಸಮಯವನ್ನು ರೋಗಿಗಳ ಶುಶ್ರೂಷೆಯಲ್ಲಿ ಕಳೆಯುತ್ತಿದ್ದಾರೆ. ವೈದ್ಯರು ಸದಾ ಸಮಾಜದ ಉನ್ನತ ಬೆಳವಣಿಗೆಗೆ, ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿ ದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಕೊರೊನಾ ವೈರಸ್ ಬಗ್ಗೆ ಅರಿವು ಮೂಡಿಸುವಲ್ಲಿ ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ, ಆದರೂ ಸಾರ್ವಜನಿಕರಲ್ಲಿ ಇನ್ನೂ ವೈರಸ್‌ನ ಆತಂಕ ಮನೆ ಮಾಡಿದೆ. ಈ ಅವಧಿಯಲ್ಲಿ ಸಾಕಷ್ಟು ವೈದ್ಯರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ.

ತಾಯಿ ಶಿಶುವಿಗೆ ಜನ್ಮ ನೀಡಬೇಕಾದರೆ ಅವಳಿಗೆ ವೈದ್ಯರ ಸಹಾಯವಿಲ್ಲದೆ ಪ್ರಸವವಾಗಲು ಸಾಧ್ಯವಿಲ್ಲ ಎನ್ನುವಂತಹ ವಾತಾವರಣ ಇಂದು ನಿರ್ಮಾಣವಾಗಿದೆ. ಜನನದ ನಂತರ ಮಗು ಮತ್ತು ಬಾಣಂತಿಯ ಆರೈಕೆ ವೈದ್ಯರ ಮಾರ್ಗದರ್ಶನ ದಲ್ಲಿಯೇ ನಡೆಯಬೇಕು. ಮಾನಸಿಕ ಅಸ್ವಸ್ಥ (ಬುದ್ಧಿಮಾಂಧ್ಯ) ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ವೈದ್ಯರ ಶ್ರಮ ಹೇಳತೀರದು. ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನಕ್ಕೆ ಒಳಗಾದ ಯುವ ಜನತೆಯನ್ನು ವ್ಯಸನದಿಂದ ಹೊರತರಲು ಅವರೊಂದಿಗೆ ಮುಕ್ತವಾಗಿ ಸಮಾಲೋಚನೆ ನಡೆಸಿ ಅವರ ಸಮಸ್ಯೆಗಳಿಗೆ ಹಂತ-ಹಂತವಾಗಿ ಪರಿಹಾರ ದೊರೆಯುವಂತೆ ಮಾಡಿ ಅವರ ಮುಂದಿನ ಭವಿಷ್ಯದ ಬಗ್ಗೆ ಕಾಳಜಿ ವಹಿಸುತ್ತಾರೆ.

'ವೈದ್ಯೋ ನಾರಾಯಣೋ ಹರಿಃ' ಎಂಬ ವಾಕ್ಯದಂತೆ ದೇವರು ಎಲ್ಲಾ ಕಡೆಯಲ್ಲೂ ನೆಲೆಸಲು ಸಾಧ್ಯವಿಲ್ಲವೆಂದೇ ವೈದ್ಯರನ್ನು ಸೃಷ್ಟಿಸಿದ್ದಾನೆ. ವೈದ್ಯರು ಜನ ಸಾಮಾನ್ಯರ ಜೀವನದಲ್ಲಿ ದೇವರ ಪಾತ್ರ ನಿರ್ವಹಿಸುತ್ತಾರೆ, ಜನರು ತಮ್ಮ ಜೀವನದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಯಾವುದೇ ವಿಚಾರಗಳ ಬಗ್ಗೆ ತಕ್ಷಣವೇ ವೈದ್ಯರ ಬಳಿಯೇ ಹೋಗುತ್ತಾರೆ. ಅದಕ್ಕೆ ಪರಿಹಾರವನ್ನು ಕೂಡ ವೈದ್ಯರಿಂದಲೇ ಪಡೆದುಕೊಳ್ಳುತ್ತಾರೆ. ಕೊರೊನಾ ಸಂದರ್ಭದಲ್ಲಿ ಸಾಕಷ್ಟು ವೈದ್ಯರು, ದಾದಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಕಿಯರು ತಮ್ಮ ಜೀವದ ಹಂಗನ್ನು ತೊರೆದು ತಮ್ಮ ಕುಟುಂಬವನ್ನೂ ಲೆಕ್ಕಿಸದೇ ಜನಸಾಮಾನ್ಯರ ಜೀವದ ಅಳಿವು-ಉಳಿವಿಗಾಗಿ ಅವರ ಆರೈಕೆಯಲ್ಲಿಯೇ ತಮ್ಮ ಶಕ್ತಿ ಮೀರಿ ಹೋರಾಟ ನಡೆಸುತ್ತಿದ್ದಾರೆ. ಇಂದಿನವರೆಗೂ ಈ ವೈರಸ್ ಜನಾಂಗ, ಜಾತಿ, ಮತ ಎಂಬ ಯಾವುದೇ ಭೇದವಿಲ್ಲದೇ ಎಲ್ಲರನ್ನೂ ತನ್ನ ಅಟ್ಟಹಾಸಕ್ಕೆ ಬಲಿ ಪಡೆಯುತ್ತಿದೆ. ಈ ಕೊರೊನಾ ವೈರಸ್‌ನ ಅಟ್ಟಹಾಸದೊಂದಿಗೆ ಯುದ್ಧ ಮಾಡಿ ಜನರ ಆರೈಕೆಯೇ ನಮ್ಮ ಗುರಿ ಎಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಈ ದಿಟ್ಟ ಹೆಜ್ಜೆ ಸಫಲವಾಗಬೇಕಾದರೆ ಸಾರ್ವಜನಿಕರ ಸಹಕಾರವು ಅತ್ಯಗತ್ಯ.

**- ಮಾಲತಿ ಜಿ.ಜೋಷಿ**
ಅಪ್ರೆಂಟಿಸ್, ವಾರ್ತಾ ಇಲಾಖೆ.
malathigjoshi@gmail.com

# ಅನುವಂಶಿಕವಾಗಿ ಕ್ಯಾನ್ಸರ್ ಬರುವ ಸಾಧ್ಯತೆ

## ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಶಶಿಕಲಾ ಕೃಷ್ಣಮೂರ್ತಿ



ದಾವಣಗೆರೆ, ಮಾ. 29- ಕುಟುಂಬದಲ್ಲಿ ಯಾರಿಗಾದರೂ ಕ್ಯಾನ್ಸರ್ ಇದ್ದರೆ, ಅನುವಂಶಿಕವಾಗಿ ಈ ಕ್ಯಾನ್ಸರ್ ಬರುವ ಸಾಧ್ಯತೆ ಇರುವುದು. ಇಂಥವರು ಕ್ಯಾನ್ಸರ್ ತಡೆಗಟ್ಟಲು ಆಗಾಗ್ಗೆ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಎಸ್ಸೆಸ್ ವೈದ್ಯಕೀಯ ಮಹಾವಿದ್ಯಾಲಯದ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ತಿಳಿಸಿದರು.

ಅವರು ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೇಷನ್ ಸೈನ್ಸ್ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್ ರೋಗವನ್ನು ಪ್ರಾಥಮಿಕ ಹಂತದಲ್ಲಿ ಗುರುತಿಸಿ, ತಡೆಗಟ್ಟುವುದು ಹೇಗೆ ಎಂಬುದರ ಕುರಿತು ಮಾತನಾಡಿ ಒಂಭತ್ತು ಮಹಿಳೆಯರಲ್ಲಿ ಒಬ್ಬರು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಬಾಯಿ, ಸ್ತನ, ಗರ್ಭಕೋಶ, ಶ್ವಾಸಕೋಶದ ಕ್ಯಾನ್ಸರ್‌ಗಳನ್ನು ಧೂಮಪಾನದಿಂದ ಆಹ್ವಾನ ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ಈ ದುಶ್ಚಟದಿಂದ ದೂರವಿರಿ. ಮದ್ಯಪಾನವೂ ಸಹ ಹಾನಿಕರ. ನಾವು ತೆಗೆದುಕೊಳ್ಳುವ ಆಹಾರದ ಮೇಲೆ ಗಮನವಿರಬೇಕು ಎಂದು ಶಶಿಕಲಾ ಕೃಷ್ಣಮೂರ್ತಿ ತಿಳಿಸಿದರು.

ಕಾಲೇಜಿನ ನಿರ್ದೇಶಕರಾದ ಪ್ರೊ. ವೈ. ವೃಷಭೇಂದ್ರಪ್ಪ, ಇನ್ಫಾರ್ಮೇಷನ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಡಾ. ಬಿ. ಪೂರ್ಣಿಮ ಮಾತನಾಡಿದರು. ಪ್ರಾಂಶುಪಾಲ ಡಾ. ಸದಾಶಿವ ಕಣಕುಪ್ಪಿ ಉಪಸ್ಥಿತರಿದ್ದರು.


ವರ್ಷ ಸ್ವಾಗತಿಸಿದರು. ಕರುಣ ಪ್ರಾರ್ಥಿಸಿದರು. ರಂಜನ ನಿರೂಪಿಸಿದರು. ವಿನುತ ಮುಖ್ಯ ಅತಿಥಿಗಳ ಪರಿಚಯ ನೆರವೇರಿಸಿದರು.

## ಹರಿಹರದ ಸಪ್ತರ್ಷಿ ಯೋಗ ಕೇಂದ್ರದಲ್ಲಿ ಯೋಗ ಪ್ರದರ್ಶನ




ಹರಿಹರ, ಮಾ. 29- ಕೈಗಾರಿಕಾ ಪ್ರದೇಶದಲ್ಲಿರುವ ಸಪ್ತರ್ಷಿ ಯೋಗ ಕೇಂದ್ರದಲ್ಲಿ ಯೋಗ ಪಟುಗಳು ವಿವಿಧ ಆಸನಗಳನ್ನು ಮಾಡುವ ಮೂಲಕ ಈಚೆಗೆ ಯೋಗ ಉತ್ಸವ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಯೋಗ ತರಬೇತುದಾರ ಕೆ.ಜೈಮುನಿ, ಯೋಗ ಪಟುಗಳಾದ ಸಿ.ಕೆ. ಕುಶಾಲ್, ಪ್ರಗತಿ, ಪ್ರೇರಣಾ, ಸಿ. ನವ್ಯ, ಪ್ರಾರ್ಥನಾ, ಗಗನ್, ರಿತಿಕಾ, ಹರಿಪ್ರಸಾದ್, ಶ್ರೀಅಭಯ್, ಸ್ಪಂದನಾ, ಚೇತನ ಹಾಗೂ ಗುರುಪ್ರಸಾದ್ ಉಪಸ್ಥಿತರಿದ್ದರು.

## ಏ.18 ರಂದು ಉಚಿತ ಉಪನಯನ



ದಾವಣಗೆರೆ, ಮಾ.29- ಶ್ರೀ ಶಿವಚಿದಂಬರ ಸೇವಾ ಸಂಘದಿಂದ ನಿಟ್ಟುವಳ್ಳಿಯ ಶ್ರೀ ಶಿವಚಿದಂಬರ ದೇವಸ್ಥಾನದಲ್ಲಿ ಬರುವ ಏಪ್ರಿಲ್ 18 ರ ಭಾನುವಾರ ಬ್ರಾಹ್ಮಣರಿಗೆ ಸಾಮೂಹಿಕ (ಉಚಿತ) ಉಪನಯನಗಳನ್ನು ಹಮ್ಮಿಕೊಳ್ಳಲಾಗಿದೆ. ಭಾಗವಹಿಸುವವರು ಏ. 10 ರೊಳಗೆ ತಮ್ಮ ಹೆಸರುಗಳನ್ನು ನೋಂದಾಯಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆಗಳು 99862 58416, 90352 62307, 90080 82006.

# ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದಿಂದ ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 29- ನಗರದ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ನಗರದ ಪಿ.ಜೆ. ಬಡಾವಣೆಯ ಚೇತನ ಹೋಟೆಲ್ ರಸ್ತೆಯಲ್ಲಿರುವ ಪಂಚಮಸಾಲಿ ಸಮಾಜದ ಕಚೇರಿಯಲ್ಲಿ ಆಚರಿಸಲಾಯಿತು.

ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ರಶ್ಮಿ ನಾಗರಾಜ್ ಕುಂಕೋದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಈ ವರ್ಷದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದ ಶ್ರೀಮತಿ ಕಂಚಿಕೇರಿ ಸುಶೀಲಮ್ಮ, ಡಾ. ಪುಷ್ಪಲತಾ ಭಾಗವಹಿಸಿದ್ದರು.

ಮಹಿಳಾ ದಿನಾಚರಣೆ ಅಂಗವಾಗಿ ಕೋವಿಡ್ 19 ವಿರುದ್ಧ ಹೋರಾಡುತ್ತಿರುವ ಜಿಲ್ಲಾ ಆಸ್ಪತ್ರೆಯ ಹೆಡ್ ನರ್ಸ್‌ಗಳಾದ ಶ್ರೀಮತಿ ಉಮಾ ಹಾಗೂ ಶ್ರೀಮತಿ ಪುಷ್ಪವಾಲಿ ಇವರುಗಳಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಶ್ರೀಮತಿ ನೀಲಗುಂದ ಜಯಮ್ಮ, ಶ್ರೀಮತಿ ಮುಂಡಾಸ್ ಸರೋಜಮ್ಮ, ಶ್ರೀಮತಿ ವಾಣಿ ಗುರು ಮತ್ತು ಜಿಲ್ಲಾ ಘಟಕದ ಕಾರ್ಯದರ್ಶಿಗಳಾದ ಶ್ರೀಮತಿ ವೀಣಾ ಕೊಟ್ರೇಶ್, ನಗರ ಘಟಕದ ಕಾರ್ಯದರ್ಶಿ ಶ್ರೀಮತಿ ಶಶಿಕಲಾ ಶಿವಲಿಂಗಪ್ಪ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀಮತಿ ವೀಣಾ ನಟರಾಜ್ ಬೆಳ್ಳೂಡಿ, ಶ್ರೀಮತಿ ಉಮಾ ಸೋಮಶೇಖರ್ ನಿರೂಪಿಸಿದರು. ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಮತಿ ಶೈಲಾ ಪ್ರಾರ್ಥಿಸಿದರು. ಶ್ರೀಮತಿ ಸುಮ ಪಾಟೀಲ್, ಶ್ರೀಮತಿ ರಶ್ಮಿ ನಾಗರಾಜ್ ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಗೌಡ ಸಾರಸ್ವತ ಸಮಾಜದ 45ನೇ ಶ್ರೀ ಗಣೇಶೋತ್ಸವ ಸುಸಂಪನ್ನ

ದಾವಣಗೆರೆ, ಮಾ.29- ಗೌಡ ಸಾರಸ್ವತ ಸಮಾಜದ ಆಶ್ರಯದಲ್ಲಿ ನಡೆದ ಶ್ರೀ ಗಣೇಶೋತ್ಸವ ಕಾರ್ಯಕ್ರಮ ಸುಸಂಪನ್ನಗೊಂಡಿದೆ ಎಂದು ಸಮಾಜದ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಸುಕೃತೀಂದ್ರ ಕಲಾ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಗಣೇಶ ಮೂರ್ತಿ ಪ್ರತಿಷ್ಠಾಪನೆ, ಸಂಕಲ್ಪ ಗಣಹೋಮ, ನಿತ್ಯ ಪೂಜೆ, ಅನ್ನ ಸಂತರ್ಪಣೆ, ನೈವೇದ್ಯ, ಹೂವಿನ ಅಲಂಕಾರ, ರಂಗಪೂಜೆ ಇತ್ಯಾದಿ ಧಾರ್ಮಿಕ ವಿಧಿ-ವಿಧಾನ ಗಳನ್ನು ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಸಮಾಜದ ಉಪಾಧ್ಯಕ್ಷ ಅಮಿತಾ ವಿ. ಪೈ, ಕಾರ್ಯದರ್ಶಿ ಕೆ. ವೆಂಕಟರಮಣ ಭಟ್, ಖಜಾಂಚಿ ಆರ್. ವಿ. ಶೆಣೈ, ಸಹ ಕಾರ್ಯದರ್ಶಿ ರಾಜೇಶ್ ಪ್ರಭು, ಸಮಿತಿ ಸಹ ಸದಸ್ಯರಾದ ಎಂ. ನರಸಿಂಹ ಕಾಮತ್, ರಾಘವೇಂದ್ರ ಕಾಮತ್, ಗುರುಪ್ರಸಾದ್ ಬಾಳಿಗ, ರೇಖಾ ಡಿ. ಪ್ರಭು, ಜಯಶ್ರೀ ಡಿ. ಪೈ, ಗಣೇಶ್ ಗೋಪಾಲ್ ತಿಳ್ವೆ, ಸಮಾಜದ ಹಿರಿಯ ಮುಖಂಡರೂ, ಮಾಜಿ ಅಧ್ಯಕ್ಷರುಗಳಾದ ಡಾ. ಕೋಟಾ ಮೋಹನ್‌ದಾಸ್ ಹೆಗಡೆ, ವಿಷ್ಣು ನಾರಾಯಣ ಪೈ, ಕಿರಣ್ ವಾಲಾವಾಲ್ಕರ್, ಎನ್. ರವಿಚಂದ್ರ ನಾಯಕ್, ದೇವದಾಸ್ ಪೈ, ಸಿ.ಪಿ. ಕಾಮತ್ ಇನ್ನಿತರರಿದ್ದರು.

## ನಂದಿಗುಡಿ : ವಿದ್ಯಾರ್ಥಿಗಳಿಗೆ ಕೊರೊನಾ ಟೆಸ್ಟ್




ಮಲೇಬೆನ್ನೂರು, ಮಾ.29- ಎರಡನೇ ಹಂತದ ಕೊರೊನಾ ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ನಂದಿಗುಡಿ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆಯಲ್ಲಿ 247 ವಿದ್ಯಾರ್ಥಿಗಳಿಗೆ, 9 ಜನ ಶಿಕ್ಷಕರಿಗೆ ಇಬ್ಬರು ಬೋಧಕೇತರರಿಗೆ, 11 ಜನ ಅಡುಗೆ ಸಿಬ್ಬಂದಿಗಳಿಗೆ ಶನಿವಾರ ಕೊರೊನಾ ಟೆಸ್ಟ್ ಮಾಡಲಾಯಿತು. ಇದಲ್ಲದೆ ಹರಿಹರ ತಾಲ್ಲೂಕಿನ ಪ್ರತಿಯೊಂದು ಶಾಲಾ-ಕಾಲೇಜು, ಹೋಟೆಲ್, ಡಾಬಾ, ಅಂಗಡಿ ಮಾಲ್‌ಗಳಲ್ಲಿ ಕೊರೊನಾ ಟೆಸ್ಟ್ ಮಾಡಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ.

ಆ ಪ್ರಕಾರ ಹಂತ ಹಂತವಾಗಿ ಟೆಸ್ಟ್‌ಗಳನ್ನು ಹೆಚ್ಚಿಸಲಾಗುವುದೆಂದು ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರಾದ ಮಂಜಪ್ಪ, ಆಶಾ, ಸ್ಟಾಫ್ ನರ್ಸ್, ಮಂಜುನಾಥ ಅಗಡಿ, ಮುಕ್ಸುದ್ ಅಹ್ಮದ್, ಪ್ರಯೋಗ ಶಾಲಾ ತಂತ್ರಜ್ಞರಾದ ಆಂಜನೇಯ, ಶಫೀವುಲ್ಲಾ, ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿ ತೋಸಿಕ್‌ವುಲ್ಲಾ, ನವೀನ್ ಹಾಜರಿದ್ದರು.

## ಕೊಂಡಜ್ಜಿಯಲ್ಲಿ ಮಕ್ಕಳ ಲೋಕದ ಸಾಹಿತ್ಯೋತ್ಸವ

ದಾವಣಗೆರೆ, ಮಾ.29- ಹರಿಹರ ತಾಲ್ಲೂಕು ಕೊಂಡಜ್ಜಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಲೋಕದಿಂದ ಸಾಹಿತ್ಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಗೆ ಬರವಣಿಗೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ವಿಜೇತರಿಗೆ ತಾಲ್ಲೂಕು ಕಸಾಪ ಅಧ್ಯಕ್ಷ ಕೆ.ಎನ್. ಸ್ವಾಮಿ ಬಹುಮಾನ ವಿತರಿಸಿದರು. ಇದೇ ವೇಳೆ ದ.ರಾ. ಬೇಂದ್ರೆಯವರ ಸ್ಮರಣೆ ಮಾಡಲಾಯಿತು. ಇಬ್ಬರು ವಿದ್ಯಾರ್ಥಿನಿಯರು ಬೇಂದ್ರೆಯವರ ಚಿತ್ರ ಬಿಡಿಸಿದರು. ಮುಖ್ಯ ಗುರುಗಳಾದ ಹನುಮಂತಪ್ಪನವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವ ನಡೆಯಿತು. ಶಿಕ್ಷಕಿಯರಾದ ಶಾಂತಕುಮಾರಿ, ಜಯಶ್ರೀ, ಸಾವಿತ್ರಮ್ಮ, ಜ್ಯೋತಿ, ಅಂಜನಾದೇವಿ, ಚಂದ್ರಮ್ಮ ಉಷಾ, ಗುರುಗಳಾದ ಜಾಕೀರ್ ಹುಸೇನ್ ತೀರ್ಪುಗಾರರಾಗಿದ್ದರು.

## ಇಂದು, ನಾಳೆ ಬ್ರಹ್ಮಲೀನ ಸದ್ಗುರುಗಳ ಪುಣ್ಯಾರಾಧನೆ



ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಸ್ವಾಮೀಜಿ ಹಾಗೂ ಶ್ರೀ ನಿತ್ಯಾನಂದ ಸ್ವಾಮೀಜಿ ಅವರ ಪುಣ್ಯಾರಾಧನೆ ಕಾರ್ಯಕ್ರಮವನ್ನು ಇಂದು ಮತ್ತು ನಾಳೆ ಬುಧವಾರ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ದಾವಣಗೆರೆಯ ಜಡೆ ಸಿದ್ದ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ, ಹದಡಿಯ ಶ್ರೀ ಮುರುಳೀಧರ ಸ್ವಾಮೀಜಿ, ಹೋತನಹಳ್ಳಿಯ ಶ್ರೀ ಶಂಕರಾನಂದ ಸ್ವಾಮೀಜಿ, ಹರಿಹರ ರಾಮಕೃಷ್ಣ ಆಶ್ರಮದ ಶ್ರೀ ಶಾರದೇಶಾನಂದ ಮಹಾರಾಜ್ ಸೇರಿದಂತೆ, ಮತ್ತಿತರೆ ಶ್ರೀಗಳು ಭಾಗವಹಿಸಲಿದ್ದಾರೆ.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರಾದ ಹೆಚ್.ಎಸ್. ಶಿವ ಶಂಕರ್, ಬಿ.ಪಿ. ಹರೀಶ್ ಸೇರಿದಂತೆ ಇನ್ನೂ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

# ಹರಪನಹಳ್ಳಿ : ತ್ಯಾಗದ ಮತ್ತೊಂದು ಹೆಸರು ಹೆಣ್ಣು




ಹರಪನಹಳ್ಳಿ, ಮಾ.29- ತ್ಯಾಗದ ಮತ್ತೊಂದು ಹೆಸರು ಹೆಣ್ಣು. ಹೆಣ್ಣಿಗೆ ಏಕಾಗ್ರತೆ, ದೃಢತೆ ಹೆಚ್ಚಿದೆ. ಹೆಣ್ಣು ಚಟಗಳಿಗೆ ದಾಸಿಯಾಗುವುದಿಲ್ಲ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಿ.ಕೆ. ಸುಮಂಗಲ ಹೇಳಿದರು.

ಪಟ್ಟಣದ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ವತಿಯಿಂದ ಶ್ರೀಮತಿ ಬಸಮ್ಮ ಸಭಾ ಭವನದಲ್ಲಿ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿಜಯ ನಗರ ಜಿಲ್ಲಾ ಪ್ರಥಮ ಮಹಿಳಾ ಕವಿಗೋಷ್ಠಿ, ವಿಚಾರ ಸಂಕಿರಣ ಮತ್ತು ಸಾಧಕ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿಗೆ ಬಟ್ಟೆ ಸಂಸ್ಕೃತಿಯನ್ನು ಪೋಷಕರು ಕಲಿಸಬೇಕು. ಹೆಣ್ಣಿನ ರಕ್ಷಣೆಯನ್ನು ಹೆಣ್ಣೇ ಮಾಡಬೇಕು ಎಂದರು.

ಉಪನ್ಯಾಸಕಿ ಸುಧಾ ಚಿದಾನಂದ ಗೌಡ ಮಾತನಾಡಿ ಹೆಣ್ಣು ಹೋರಾಟದ ಮೂಲಕ ಹಕ್ಕನ್ನು ಪಡೆದುಕೊಳ್ಳಬೇಕು. ಭಾರತದ ಸಂವಿಧಾನ ಮಹಿಳೆಯರಿಗೆ ಎಲ್ಲಾ ಹಕ್ಕುಗಳನ್ನು ಕೊಟ್ಟಿದೆ. ಮಹಿಳೆಯರ ಅನೇಕ ಘಟನೆಗಳಿಗೆ ಮೌನವೇ ಭಾಷೆಯಾಗಿದೆ. ಭಗೀರಥಿ ಪ.ಪೂ. ಕಾಲೇಜು ಪ್ರಾಚಾರ್ಯೆ ನಿರ್ಮಲ ಶಿವನಗುತ್ತಿ ಮಾತನಾಡಿ, ಸವಾಲುಗಳನ್ನು ಮೆಟ್ಟಿ ನಿಲ್ಲಬೇಕೆಂದು ಆತ್ಮಸ್ಥೈರ್ಯ ನೀಡಿದರು.

ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶಿಕ್ಷಕಿ ಸುಭದ್ರ ಮಾಡ್ಲಿಗೇರಿ ಡಾ|| ಪ್ರಿಯಾಂಕ ಅಧಿಕಾರ್, ಮಾತನಾಡಿದರು. ಸಪ್ನ ಮಲ್ಲಿಕಾರ್ಜುನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

**ಈಶ್ವರೀಯ ವಿವಿಯ ಬಿ.ಕೆ. ಸುಮಂಗಲ**

ವಿಜಯನಗರ ಜಿಲ್ಲಾ ಪ್ರಥಮ ಮಹಿಳಾ ಕವಿಗೋಷ್ಠಿಯಲ್ಲಿ ಪವಿತ್ರ ಬಡಿಗೇರ್, ಟಿಜಿಎಂ ಸುಲೋಚನ, ಜಯಲಕ್ಷ್ಮಿ ಎನ್, ನಾಗ ಮಂಜುಳ, ಡಿ. ಶಶಿಕಲಾ, ಗೀತಾ ಕಬ್ಬಳ್ಳಿ, ಹೆಚ್. ಶಾಂತ, ಹೆಚ್. ಕಮಲಾಕ್ಷಿ, ಓಬಮ್ಮ ಚಿಕ್ಕೇರಿ, ಟಿ. ವೀಣಾ ಕುಮಾರಿ, ಮಮ್ತಾಜ್ ಬೇಗಂ, ಡಾ. ಅಕ್ಷತ ಭಾಗವಹಿಸಿ ಕವನ ವಾಚನ ಮಾಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅಂಜಲಿ ಬೆಳಗಲ್, ಅಂಗಡಿ ನಾಗವೇಣಿ, ಪುಷ್ಪಾವತಿ, ಹೆಚ್.ಎಂ. ಸಂಚಿತ., ಎಸ್. ಅಂಬಿಕಾ, ಜಿ. ಸುಧಾರಾಣಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಲ್. ಸಂಗೀತಾ, ಜಿ. ರಂಜಿತಾ, ಲತಾ ರಾಥೋಡ್, ಬಿ.ಆರ್. ದೀಪಾ, ಜಿ. ಗೀತಾ, ಪುಷ್ಪ, ರೋಹಿಣಿ, ಕರಿಬಸಮ್ಮ ಮೇಧಾವತಿ ಇನ್ನಿತರರಿದ್ದರು.

## ಮಲಬಾರ್‌ನಿಂದ ಹೊಸ 56 ಸ್ಟೋರ್‌ಗಳು ಆರಂಭ

ಬೆಂಗಳೂರು, ಮಾ.29- ದೇಶದ ಅತಿ ದೊಡ್ಡ ಚಿನ್ನ ಮತ್ತು ವಜ್ರದ ರಿಟೇಲ್ ಚೇನ್‌ಗಳಲ್ಲಿ ಒಂದಾಗಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ಭಾರತದಲ್ಲಿ 40 ಸೇರಿದಂತೆ ಜಗತ್ತಿನಾದ್ಯಂತ 56 ಹೊಸ ಸ್ಟೋರ್‌ಗಳನ್ನು ಆರಂಭಿಸುವುದಾಗಿ ಘೋಷಣೆ ಮಾಡಿದೆ.

ಆರಂಭಕ್ಕೆ 1,600 ಕೋಟಿ ರೂಪಾಯಿಗಳ ಒಟ್ಟಾರೆ ಬಂಡವಾಳ ಹೂಡಲಿದ್ದು, 1,750 ಹೊಸ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ. ದೇಶದಲ್ಲಿ ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಒಡಿಶಾ ಮತ್ತು ಕೇರಳ ರಾಜ್ಯಗಳಲ್ಲಿ ಹೊಸ ಮಳಿಗೆಗಳನ್ನು ಆರಂಭಿಸಲಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿಂಗಾಪುರ, ಮಲೇಷ್ಯಾ, ಓಮನ್, ಕತಾರ್, ಬಹರೇನ್ ಮತ್ತು ಯುಎಇಗಳಲ್ಲಿ ಆರಂಭಿಸಲಾಗುವುದು.

ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್ ಮಾತನಾಡಿ, ಚಿನ್ನ ಮತ್ತು ವಜ್ರಾಭರಣ ರಿಟೇಲ್, ಆಭರಣ ತಯಾರಿಕೆ ಮತ್ತು ಬಹು ವಿಧದ ರಿಟೇಲ್ ಪರಿಲಕ್ಷನೆಯನ್ನು ಅನುಷ್ಠಾನಕ್ಕೆ ತಂದಿರುವ ಪ್ರಮುಖ ಬ್ರಾಂಡ್ ಆಗಿದೆ. ವಿಶ್ವಾಸ, ಗುಣಮಟ್ಟ ಮತ್ತು ಅತ್ಯುತ್ತಮ ಸೇವೆಗಳನ್ನು ಗ್ರಾಹಕರಿಗೆ ಒದಗಿಸುವುದರ ಜೊತೆಗೆ ಮಲಬಾರ್ ಗುಣಮಟ್ಟ ಮತ್ತು ಅತ್ಯುತ್ತಮ ಸೇವೆಯ ಭರವಸೆಯನ್ನು ನೀಡುತ್ತಿದೆ ಎಂದಿದ್ದಾರೆ. ಮಲಬಾರ್‌ನ ಭಾರತದ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಒ. ಅಶರ್ ಮಾತನಾಡಿ, ನಮ್ಮ ರಿಟೇಲ್ ವಿಸ್ತರಣೆ ಯೋಜನೆಯು ನಾವು ಈಗಾಗಲೇ ಸದೃಢವಾಗಿರುವ ಪ್ರದೇಶಗಳಲ್ಲಿ ಮತ್ತಷ್ಟು ಶಕ್ತಿಶಾಲಿಯನ್ನಾಗಿ ಮಾಡುವ ಭಾಗವಾಗಿದೆ ಎಂದರು. ಪ್ರಸ್ತುತ ಗ್ರೂಪ್ ಜಿಸಿಸಿ, ಭಾರತ, ಮಲೇಷ್ಯಾ, ಸಿಂಗಾಪುರ ಮತ್ತು ಯುಎಸ್‌ಎಗಳಲ್ಲಿ ಸಂಬಂಧಿತ ಪ್ರದೇಶಗಳಲ್ಲಿ ಸಮಾನ ಮನಸ್ಕ ಸಂಸ್ಥೆಗಳ ಸಹಯೋಗದಲ್ಲಿ ಹಲವಾರು ಸಮಾಜಮುಖಿ ಚಟುವಟಿಕೆಗಳನ್ನು ನಡೆಸುತ್ತಿದೆ ಎಂದಿದ್ದಾರೆ.

# ಕೊರೊನಾ ಚಿಂತೆ ಬೇಡ, ಆದರೆ ಇರಲಿ ಒಂದು ಚಿಂತನೆ...

ಈಗಾಗಲೇ ಕೊರೊನಾ ಮಹಾಮಾರಿ ಜಗದ ಅಧಿಪತ್ಯವನ್ನಾವರಿಸಿ ಒಂದು ವರುಷವೇ ಕಳೆದಿದೆ.

ಸಾಮಾನ್ಯವಾಗಿ ಯಾವುದೇ ಕಾಯಿಲೆಗಳ ವಿಚಾರ ಬಂದಾಗ ಇದು ವೈದ್ಯ ಮತ್ತು ರೋಗಿಯ ನಡುವಿನ ವಿಚಾರವಾಗಿರುತ್ತದೆ. ಆದರೆ ಜಾಗತಿಕ ಮಟ್ಟದಲ್ಲಿ ಸಾಂಕ್ರಾಮಿಕ ಕಾಯಿಲೆಗಳು ಆವರಿಸಿದಾಗ ಇದು ಎಲ್ಲ ಕ್ಷೇತ್ರಗಳಲ್ಲಿಯೂ ಒಂದು ಮಟ್ಟದಲ್ಲಿ ಅಸ್ಥಿರತೆಯನ್ನು ಉಂಟು ಮಾಡಿ ಜನರಲ್ಲಿ ಆತಂಕ, ಮುಂದಿನ ಜೀವನದ ಬಗ್ಗೆ ಅನಿರ್ದಿಷ್ಟತೆ ಹಾಗೂ ಖಿನ್ನತೆಯನ್ನುಂಟು ಮಾಡುತ್ತದೆ ಎಂದರೆ ತಪ್ಪಾಗಲಾರದು.

ಆದರೂ ಒಂದು ವರ್ಷದಲ್ಲಿ ಈ ಕಾಯಿಲೆಯ ವಿರುದ್ಧ ಹೋರಾಡಿದ ಕೀರ್ತಿ ಮನುಕುಲದ್ದು ಎಂದೇ ಹೇಳಬೇಕು. ಯಾಕೆಂದರೆ ಈ ಕಾಯಿಲೆ ತಡೆಗೆ ಯಾವುದೇ ಲಸಿಕೆಗಳು ಇಲ್ಲದಾಗ, ಪರಿಣಾಮಕಾರಿಯಾದ ಔಷಧಿಗಳು ಇಲ್ಲದೆ ಇದ್ದಾಗ ಜನರು, ಮುಖ ಕವಚ ಧರಿಸುವುದು, ಸ್ಯಾನಿಟೈಸರ್ ಬಳಕೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡಿದ್ದು ಹಾಗೂ ಕಾಯಿಲೆ ಉಲ್ಬಣಗೊಂಡಾಗ ಪರಿಣಾಮಕಾರಿ ಲಾಕ್‌ಡೌನ್ ಪ್ರಕ್ರಿಯೆಯನ್ನು ಪಾಲಿಸಿದ್ದು, ಮನೆಯ ಔಷಧಿಗಳು, ಶುಚಿ-ರುಚಿ ಆಹಾರ ಸೇವನೆ ಮೊದಲಾದವುಗಳೇ, ರೋಗ ನಿರೋಧಕತೆಯನ್ನು ಹೆಚ್ಚಿಸಿ ಜನರು ತಮ್ಮನ್ನು ತಾವು ಸಂರಕ್ಷಿಸಿಕೊಂಡರು ಎಂದರೆ ಅತಿಶಯೋಕ್ತಿಯಲ್ಲ

ಇದರೊಂದಿಗೆ, ಈ ಮಹಾ ಮಾರಿಯ ಮೊದಲ ಅಲೆಯನ್ನು ವೈದ್ಯರು, ವೈದ್ಯಕೀಯ ಸಿಬ್ಬಂದಿಗಳು ಹಾಗೂ ವೈದ್ಯ ವಿಜ್ಞಾನಿಗಳು ಸರಿಯಾದ ಔಷಧಿ ಹಾಗೂ ಸೂಕ್ತ ಚಿಕಿತ್ಸಾ

ಪದ್ಧತಿಯ ಮೂಲಕ ನಿಭಾಯಿಸಿದೆವು ಅನ್ನುವುದು ವೈದ್ಯರಾದ ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಷಯ.

ಅಷ್ಟರಲ್ಲಿಯೇ ವಿಜ್ಞಾನಿಗಳ ಸತತ ಪರಿಶ್ರಮದ ಫಲದಿಂದಾಗಿ ಲಸಿಕೆಗಳ



ಆಗಮನವೂ ಆಯಿತು. ಜನರ ಆತಂಕ ಕಡಿಮೆಯಾಗಿ, ಜೀವನ ಮತ್ತೆ ಯಥಾ ಸ್ಥಿತಿಗೆ ಮರಳುತ್ತಿದೆ ಎಂಬ ಆಶಾಭಾವನೆ ಮೂಡುವ ಹೊತ್ತಿನಲ್ಲೇ ಈ ಕೊರೊನಾ ಮತ್ತೊಂದು ರೂಪದಲ್ಲಿ ಎರಡನೇ ಅಲೆಯಾಗಿ ಆವರಿಸುತ್ತಿರುವುದು ಕ್ಲೇಶದಾಯಕವಾಗಿದೆ. ಆದರೆ, ಈ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ಹಾಗೂ ಅತ್ಯಂತ ಶೀಘ್ರವಾಗಿ ನಿರ್ಮೂಲನೆ ಮಾಡಲು ಅಥವಾ ಎದುರಿಸಲು ಜನ ಸಾಮಾನ್ಯರು ಮಾಡಬೇಕಾಗಿರುವ ಕರ್ತವ್ಯಗಳ ಬಗ್ಗೆ ಒಂದು ಚಿಂತನೆಯ ಅಗತ್ಯವಿದೆ

ಮೊದಲನೆಯದಾಗಿ ಮುಖ ಕವಚವನ್ನು ತಪ್ಪದೇ ಧರಿಸುವುದು ಹಾಗೂ ಸುತ್ತ ಮುತ್ತಲಿನವರಿಗೆ ಇದರ ಅರಿವು ಮೂಡಿಸಿ ಅವರೂ ಧರಿಸುವ ಹಾಗೆ ಮಾಡುವುದು.

ಸಾಮಾಜಿಕ ಅಂತರ, ಸ್ಯಾನಿಟೈಸರ್ ಬಳಕೆ, ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಒಟ್ಟಾಗಿ ಸೇರದೇ ಇರುವುದು. ಸಭೆ ಸಮಾರಂಭಗಳನ್ನುತಕ್ಕಮಟ್ಟದಲ್ಲಿಯಾವುದೇ ವಿಜೃಂಭಣೆ ಇಲ್ಲದೆ ಅತೀ ಅಗತ್ಯವಿದ್ದಲ್ಲಿ ಮಾತ್ರವೇ, ನಿಯಮಗಳ ಪಾಲನೆಯಲ್ಲಿಯೇ ನಡೆಸುವುದು.. ಎಲ್ಲಕ್ಕಿಂತ ಮುಖ್ಯವಾಗಿ ಲಸಿಕೆಗಳನ್ನು ನಿಯಮಾನುಸಾರ ಆದಷ್ಟು ಶೀಘ್ರವೇ ಹಾಕಿಸಿಕೊಳ್ಳುವುದಾಗಿದೆ.

ಲಸಿಕೆ ಹಾಕಿಸಿಕೊಂಡಿದ್ದರೂ, ಈಗಾಗಲೇ ನಿಮಗೆ ಕೊರೊನಾ ಕಾಯಿಲೆ ಬಂದು ಹೋಗಿದ್ದರೂ, ನಿಯಮಗಳನ್ನು ಪಾಲಿಸಲೇ ಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

ಇನ್ನು ಆರೋಗ್ಯದಲ್ಲಿ ಯಾವುದೇ ಚಿಕ್ಕ ಪುಟ್ಟ ವ್ಯತ್ಯಾಸ ಕಂಡು ಬಂದರೂ ಸ್ವಯಂ ಚಿಕಿತ್ಸೆಯಾಗಲೀ, ಅಕ್ಕ-ಪಕ್ಕದವರ ಸಲಹೆ ಮೇರೆಗೆ ಔಷಧಿ ತೆಗೆದುಕೊಳ್ಳದೆ ನೀವು ಯಾವಾಗಲೂ ಹೋಗುವ ವೈದ್ಯರ ಬಳಿಯೇ ಹೋಗಿ ಯಾವುದೇ ಭಯ ಹಾಗೂ ಹಿಂಜರಿಕೆ ಇಲ್ಲದೆ ಸಲಹೆ ಮತ್ತು ಚಿಕಿತ್ಸೆ ತೆಗೆದುಕೊಳ್ಳಿ. ಅಗತ್ಯವಿದ್ದಲ್ಲಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ.

ಸ್ವಯಂ ಚಿಕಿತ್ಸೆ ಮಾಡಿಕೊಂಡು ಎಲ್ಲ ಕಡೆ ಸುತ್ತಾಡಿದರೆ ಸ್ವಯಂ ತೊಂದರೆ ಮಾಡಿಕೊಳ್ಳುವುದಲ್ಲದೇ, ಇತರರಿಗೂ ಕಾಯಿಲೆ ಹರಡುವ ಪಾಪ ಕಾರ್ಯ ನಮ್ಮಿಂದಾಗುತ್ತದೆ ಎಂಬ ಪಾಪ ಪ್ರಜ್ಞೆ ನಮಗಿರಲಿ.

ಒಳ್ಳೆಯ ಆಹಾರ, ವಿಹಾರ, ವ್ಯಾಯಾಮ, ಯೋಗ, ಧ್ಯಾನದ ಜತೆಗೆ ಒಳ್ಳೆಯ ಚಿಂತನೆಗಳೂ ನಮ್ಮದಾಗಲಿ ಎಂದು ಹಾರೈಸುತ್ತಾ ಹೊಸ ಪ್ಲವ ನಾಮ ಸಂವತ್ಸರದಲ್ಲಿ ಆರೋಗ್ಯವಂತ ಸಮಾಜ ನಮ್ಮದಾಗಲಿ ಎಂದು ಆಶಿಸೋಣ.

**-ಡಾ. ಆರತಿ ಸುಂದರೇಶ್**
ಹೋಮಿಯೋಪಥಿ ವೈದ್ಯರು, ದಾವಣಗೆರೆ.

## ರಾಜ್ಯ - ರಾಷ್ಟ್ರೀಯ ವಾರ್ತೆ

### ಒಂದೇ ದಿನ 68,020 ಕೊರೊನಾ ಸೋಂಕಿತರು ಪತ್ತೆ

ನವದೆಹಲಿ, ಮಾ.29- ದೇಶದಲ್ಲಿ ಸೋಮವಾರ ಒಂದೇ ದಿನ 68,020 ಕೊರೊನಾ ಸೋಂಕಿತರು ಕಂಡುಬಂದಿದ್ದಾರೆ. ಕಳೆದ 19 ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ ಅಂಶಗಳು ತಿಳಿಸಿವೆ.

ಪ್ರಸಕ್ತ ದೇಶದಲ್ಲಿ 5.21 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಕಳೆದ ವರ್ಷ ಅಕ್ಟೋಬರ್ ನಂತರ ಇದೇ ಮೊದಲ ಬಾರಿಗೆ ಅತಿ ಹೆಚ್ಚಿನ ಸೋಂಕಿತರು ಒಂದೇ ದಿನ ಕಂಡು ಬಂದಿದ್ದಾರೆ.

### ರಾಜ್ಯದಲ್ಲಿ 2,792 ಸೋಂಕಿತರು

ಬೆಂಗಳೂರು, ಮಾ. 29 - ರಾಜ್ಯದಲ್ಲಿ ಸೋಮವಾರ 2,792 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 16 ಜನರು ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇದೇ ದಿನ 1,964 ಜನ ಆಸ್ಪತ್ರೆಯಿಂದ ಗುಣವಾಗಿ ಬಿಡುಗಡೆಯಾಗಿದ್ದಾರೆ.

ಬೆಂಗಳೂರು ನಗರ ಒಂದರಲ್ಲೇ 1,742 ಸೋಂಕಿತರು ಕಂಡು ಬಂದಿದ್ದಾರೆ. ರಾಜ್ಯದಲ್ಲಿ 23,849 ಸಕ್ರಿಯ ಸೋಂಕಿತರಿದ್ದಾರೆ.

## ರಾಜ್ಯ ಮಟ್ಟದ ಮಾಸ್ಟರ್ ಗೇಮ್ಸ್‌ನಲ್ಲಿ ಪದಕ : ಅಭಿನಂದನೆ



ದಾವಣಗೆರೆ ಮಾ.259 - ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ 2ನೇ ಮಾಸ್ಟರ್ ಗೇಮ್ಸ್‌ನಲ್ಲಿ ಜಿಲ್ಲೆಯ ಕ್ರೀಡಾಪಟುಗಳಾದ ವಿಶಾಲಾಕ್ಷಿ, ನೀಲಮ್ಮ, ಪುಷ್ಪ, ಲಕ್ಷ್ಮಣ್‌ರಾವ್, ನಾಗರಾಜಪ್ಪ, ಲಕ್ಷ್ಮಣ ಕೆ.ಎಂ. ಅಣ್ಣಪ್ಪ, ವೆಂಕಟೇಶ್, ಗುರುಶಾಂತಪ್ಪ, ಫಕ್ಕೀರೇಶ್ ಮತ್ತು ಅಂತರರಾಷ್ಟ್ರೀಯ ತರಬೇತುದಾರ ಸಂತೋಷ್. ಡಿ ಇವರುಗಳು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದು, ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

## ಕಲಾಕುಂಚದ ದಾವಣಗೆರೆ ಗೃಹಿಣಿ ಸ್ಪರ್ಧೆ ಫಲಿತಾಂಶ

ದಾವಣಗೆರೆ, ಮಾ.29- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದ ಆಶ್ರಯದಲ್ಲಿ ನಿನ್ನೆ ನಗರದ ಕುವೆಂಪು ಕನ್ನಡ ಭವನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾದ 'ದಾವಣಗೆರೆ ಗೃಹಿಣಿ ಸ್ಪರ್ಧೆ-2021'ರ ಫಲಿತಾಂಶ ಈ ಕೆಳಗಿನಂತಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

ಪ್ರಥಮ ಸ್ಥಾನ ಶ್ರೀಮತಿ ಸುನಂದ ಜಂಬನಗೌಡ, ದ್ವಿತೀಯ ಸ್ಥಾನ ಶ್ರೀಮತಿ ಶೈಲಾ ವಿನೋದ್ ದೇವರಾಜ್, ತೃತೀಯ ಸ್ಥಾನ ವೀಣಾ ರವಿಕುಮಾರ್, ವಿಜೇತರಿಗೆ ದಾವಣಗೆರೆಯ ಕುವೆಂಪು ಕನ್ನಡ ಭವನದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ವೇದಿಕೆಯಲ್ಲಿ ನಡೆದ ಸಮಾರಂಭದಲ್ಲಿ ವಿಜೇತ ಪಟ್ಟಿ, ತಲೆಯ ಮೇಲೆ ಕಿರೀಟ ಧಾರಣೆಯೊಂದಿಗೆ ಪ್ರಮಾಣ ಪತ್ರ, ಸ್ಮರಣಿಕೆ ಹಾಗೂ ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್ ಜವಳಿ ಉದ್ಯಮದ ಸೀರೆ ಉಡುಗೊರೆಯೊಂದಿಗೆ ಸ್ಥಾನಗಳನ್ನು ಘೋಷಿಸಿ, ಪ್ರಶಸ್ತಿ ವಿತರಿಸಲಾಯಿತು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಶೋಭಾ ಚಪ್ಪರದಹಳ್ಳಿಮಠ ತಿಳಿಸಿದ್ದಾರೆ.

ಸಮಾರಂಭದ ಉದ್ಘಾಟಕರಾಗಿ ಆಗಮಿಸಿದ ಮುಂಡರಗಿಯ ಈಶ್ವರಿ ಮಹಿಳಾ ಫೌಂಡೇಶನ್ ಸಂಸ್ಥಾಪಕರಾದ ಪ್ರಭಾವತಿ ವಿಶ್ವನಾಥ್ ಬೆಳವಣಕಿಮಠ, ನಾಡಿನ ಹಿರಿಯ ಸಾಹಿತಿಗಳು, ಪರಿಸರವಾದಿಗಳು, ಖ್ಯಾತ ಸ್ತ್ರೀರೋಗ ತಜ್ಞೆ ಡಾ. ಶಾಂತಾ ಭಟ್, ಶ್ರೀಮತಿ ಚಂದ್ರಶೇಖರ ಅಡಿಗ, ಕುಸುಮಾ ಲೋಕೇಶ್, ರೇಖಾ ಓಂಕಾರಪ್ಪ, ಶ್ರೀಲಕ್ಷ್ಮಿ ಆಂಜನೇಯ, ಮಮತಾ ನಾಗರಾಜ್, ಶಾರದಮ್ಮ ಶಿವನಪ್ಪ, ಸಾವಿತ್ರಿ ಜಗದೀಶ್, ಮಂಜುಳಾ ಸುನೀಲ್, ಭಾಗ್ಯ ಭಾಸ್ಕರ್‌ನಾಯಕ್, ಶೈಲಾ ವಿಜಯಕುಮಾರ್, ವಸಂತಿ ಮಂಜುನಾಥ್, ಜ್ಯೋತಿ ಗಣೇಶ್‌ಶೆಣೈ, ನಿರ್ಮಲಾ ರಾಜೇಂದ್ರಬಾಬು, ಪ್ರಭಾ ರವೀಂದ್ರ ಮುಂತಾದವರು ಪಾರದರ್ಶಕವಾಗಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದರು ಎಂದು ಕಲಾಕುಂಚ ಎಸ್.ಎಸ್. ಬಡಾವಣೆ ಶಾಖೆಯ ಅಧ್ಯಕ್ಷರಾದ ಸುಜಾತ ಬಸವರಾಜ್ ತಿಳಿಸಿದ್ದಾರೆ.

## ರಂಗಭೂಮಿ ದಿನಾಚರಣೆ ಒಂದು ದಿನಕ್ಕೆ ಮೀಸಲಲ್ಲ

ಸಾಣೇಹಳ್ಳಿ, ಮಾ.29- ರಂಗಭೂಮಿ ಜೀವಂತ ಕಲೆ. ಅದು ಸ್ಥಾವರವಲ್ಲ. ಜಂಗಮ. ರಂಗಭೂಮಿಯ ದಿನಾಚರಣೆ ಕೇವಲ ಒಂದು ದಿನಕ್ಕೆ ಮೀಸಲಲ್ಲ. ನಿತ್ಯ ನಿರಂತರವಾಗಬೇಕು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅಭಿಪ್ರಾಯ ಪಟ್ಟರು.

ಇಲ್ಲಿನ ಎಸ್.ಎಸ್. ರಂಗಮಂದಿರದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸರ್ಕಾರ ಇಂತಹ ಕಲೆಗೆ ಹೆಚ್ಚಿನ ನೆರವು ನೀಡುತ್ತಿಲ್ಲದಿರುವುದು ದುರ್ದೈವದ ಸಂಗತಿ. ಪ್ರಾಥಮಿಕ ಶಿಕ್ಷಣದಲ್ಲಿ ರಂಗಭೂಮಿಯ ಶಿಕ್ಷಕರನ್ನು ನೇಮಕ ಮಾಡಬೇಕು. ಇದರಿಂದ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಜಾಣರಾಗುವ ಮೂಲಕ ಶಿಕ್ಷಣ ಗುಣಮಟ್ಟ ಕಾಪಾಡಿಕೊಳ್ಳಬಹುದು ಎಂದರು.

ಮುಖ್ಯ ಅತಿಥಿಯಾಗಿ ಎ.ಸಿ. ಚಂದ್ರಣ್ಣ ಮಾತನಾಡಿ, ರಂಗಭೂಮಿಯ ಕಲೆಗಳು ಇರುವೆಡೆ ರಕ್ತದ ಕಲೆಗಳು ಇರುವುದಿಲ್ಲ. ವ್ಯಕ್ತಿಯನ್ನು ಸಂಸ್ಕಾರವಂತನ ನ್ನಾಗಿಸುವ ಶಕ್ತಿ ರಂಗಭೂಮಿಗಿದೆ.



ಪಂಡಿತಾರಾಧ್ಯ ಶ್ರೀ

ಬದ್ಧತೆ ರಂಗಭೂಮಿ ಕಲಿಸಿಕೊಡುವ ಮೊದಲ ಪಾಠ ಎಂದರು.

ಇಂಗ್ಲೆಂಡ್‌ನ ನಟಿ ಹೆಲೆನ್ ಮಿರ್ರೆ ಅವರ ವಿಶ್ವ ರಂಗಭೂಮಿ ದಿನಾಚರಣೆ ಸಂದೇಶವನ್ನು ರಂಗ ಶಿಕ್ಷಕ ಕೆ. ವೆಂಕಟೇಶ್ವರ ಅನುವಾದಿಸಿ, ವಾಚಿಸಿದರು. ವಿವಿಧ ನಾಟಕಗಳ ರಂಗಗೀತೆಗಳನ್ನು ರಂಗಶಾಲೆ ಪ್ರಾಚಾರ್ಯ ಆರ್. ಜಗದೀಶ್, ಸಂಗೀತ ಶಿಕ್ಷಕ ಹೆಚ್.ಎಸ್. ನಾಗರಾಜ್, ಅನುಪ್ರಿಯ, ತಬಲಾ ಸಾಥ್ ಶರಣ್ ಮತ್ತು ರಂಗಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟರು.

ಆತ್ಮಹತ್ಯೆ ಎನ್ನು ವಿಶಿಷ್ಟ ಕೋಲಾಟದ ರೂಪಕವನ್ನು ರಂಗಶಾಲೆ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು. ವೇದಿಕೆಯಲ್ಲಿ ರಂಗ ಶಿಕ್ಷಕ ಮಲ್ಲೇಶ್, ಕೆ. ವೆಂಕಟೇಶ್ವರ, ವಿನೋದ್ ಭಂಡಾರಿ, ಆರ್. ಜಗದೀಶ್ ಉಪಸ್ಥಿತರಿದ್ದರು.

ಕಲಾಸಂಘದ ಪದಾಧಿಕಾರಿಗಳು, ಶಾಲಾ-ಕಾಲೇಜು ಅಧ್ಯಾಪಕರು, ಗ್ರಾಮಸ್ಥರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭೋರೇಗೌಡ ಕಾರ್ಯಕ್ರಮ ನಡೆಸಿಕೊಟ್ಟರು.

## ಕಸಾಪ ಅಧ್ಯಕ್ಷರು ಗಡಿ ಕನ್ನಡಿಗರ ರಕ್ಷಣೆಗೆ ಮುಂದಾಗಿಲ್ಲ

### ಹರಪನಹಳ್ಳಿಯಲ್ಲಿ ಸಾಮಾಜಿಕ ಹೋರಾಟಗಾರ ರಾಜಶೇಖರ ಮುಲಾಲಿ

ಹರಪನಹಳ್ಳಿ, ಮಾ.29- ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿರುವ ಯುವ ಜನಾಂಗದ ಪ್ರತಿಭೆಗಳು ಗುರುತಿಸಿಕೊಳ್ಳಲು ಯುವಕರಿಗೆ ಆದ್ಯತೆ ನೀಡಿ ಎಂದು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಗೆ ಸ್ಪರ್ಧಿಸಿರುವ ಸಾಮಾಜಿಕ ಹೋರಾಟಗಾರ ರಾಜಶೇಖರ ಮುಲಾಲಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪರಿಷತ್ ಸದಸ್ಯರಿಗೆ ಹಾಗೂ ಪತ್ರಕರ್ತರಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬೇರೂರಿರುವ ಭ್ರಷ್ಟಾಚಾರದ ಬೇರುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು, ಪ್ರಶಸ್ತಿಗಳ ಲಾಬಿಗೆ ಕಡಿವಾಣ, ರಾಜಕೀಯದಿಂದ ಮುಕ್ತ ಹಾಗೂ ಪಾರದರ್ಶಕ ಆಡಳಿತ ನೀಡಲು ಶ್ರಮಿಸುತ್ತೇನೆ. ಜಿಲ್ಲೆಯ ಕಸಾಪಕ್ಕೆ ವಿಶೇಷ ಕಾರ್ಯದರ್ಶಿ ನೇಮಕ ಹಾಗೂ ಜಿಲ್ಲಾಧ್ಯಕ್ಷರ ಸ್ಥಾನಮಾನವನ್ನು ಕಲ್ಪಿಸಲು ಭರವಸೆ ನೀಡುತ್ತೇನೆ. ಪ್ರಥಮ ಬಾರಿ ಕಸಾಪ ಬಳ್ಳಾರಿ ಜಿಲ್ಲೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನನಗೆ,



ತಾಲ್ಲೂಕಿನ ಕಸಾಪ ಸದಸ್ಯರು ಮತ ನೀಡಬೇಕು ಎಂದು ಮನವಿ ಮಾಡಿದರು.

ಇಲ್ಲಿಯವರೆಗೂ ಸಾಹಿತ್ಯ ಪರಿಷತ್‌ಗೆ ಒಂದೇ ಕೋಮಿಗೆ ಸೇರಿದ ಅಧ್ಯಕ್ಷರು ಆಯ್ಕೆಯಾಗುತ್ತಿದ್ದಾರೆ. ಗಡಿಯಲ್ಲಿ ಎಂಇಎಸ್ ಪುಂಡಾಟಿಕೆ ಮಾಡುತ್ತಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಗಡಿಯಲ್ಲಿರುವ ಕನ್ನಡಿಗರ ರಕ್ಷಣೆಗೆ ಮುಂದಾಗಿಲ್ಲ. ಕನ್ನಡ ನಾಡು, ನುಡಿ, ಜಲ, ಭಾಷೆ ರಕ್ಷಣೆ ಮಾಡದವರು ಸಾಹಿತ್ಯ ಪರಿಷತ್‌ಗೆ ಏಕೆ ಬೇಕು. ಗಡಿ ಭಾಗದಲ್ಲಿ ಪರಿಷತ್ತಿನ ಸದಸ್ಯತ್ವ ವೃದ್ಧಿಸಲು ಪ್ರಯತ್ನಿಸುವೆ ಎಂದರು.

ಮುಖಂಡರಾದ ತೆಲಗಿ ಟಿ. ಮಂಜುನಾಥ, ಇರ್ಫಾನ್, ಮುದುಗಲ್, ಅಲಗಿಲವಾಡ ವಿಶ್ವನಾಥ, ಡಾ.ಬಿ.ಹೆಚ್. ಜಯಕುಮಾರ, ವೀರೇಶ್, ಜೀಶಾನ್ ಹ್ಯಾರಿಸ್ ಇನ್ನಿತರರಿದ್ದರು.

## ಗೃಹ ಸಚಿವ ಎಂಬುದನ್ನು ಬೊಮ್ಮಾಯಿ ನೆನಪಿಟ್ಟುಕೊಳ್ಳಲಿ : ಕಾಂಗ್ರೆಸ್ ಕಿಡಿ

ಬೆಂಗಳೂರು, ಮಾ.29- ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಗೃಹ ಮಂತ್ರಿ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡಿ ಎಂದು ಕಾಂಗ್ರೆಸ್ ಕಿಡಿಕಾರಿದೆ.

ಟ್ವಿಟ್ಟರ್‌ನಲ್ಲಿ ಸಿ.ಡಿ. ಪ್ರಕರಣದ ಬಗ್ಗೆ ನಿರಂತರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ಪ್ರಕರಣವಿರುವುದು ಸಂತ್ರಸ್ತೆ ಮತ್ತು ಆರೋಪಿಯ ಮಧ್ಯೆ, ಯುವತಿ ಆರೋಪ ಮಾಡುತ್ತಿರುವುದು ರಮೇಶ್ ಜಾರಕಿಹೊಳಿ ವಿರುದ್ಧ ಹಾಗೂ ರಕ್ಷಣೆ ನೀಡದ ಸರ್ಕಾರ ಮತ್ತು ಅದರ ಪಕ್ಷಪಾತದ ಬಗ್ಗೆ ದೂರುಗಳಿವೆ. ಆದರೆ, ಬಿಜೆಪಿ ತನ್ನ ಮಾನ ಮುಚ್ಚಿಕೊಳ್ಳಲು ಜನರ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಸಿ.ಡಿ. ಪ್ರಕರಣ ಹೊರಬಂದು 27 ದಿನಗಳಾಯಿತು. ಇದುವರೆಗೂ ಯುವತಿಯನ್ನು ಪತ್ತೆ ಹಚ್ಚಲಾಗಲಿಲ್ಲ. ರಮೇಶ್ ಜಾರಕಿಹೊಳಿ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿ ಮೂರ್ನಾಲ್ಕು ದಿನಗಳಾಗಿವೆ. ಆದರೆ, ಈವರೆಗೂ ಬಂಧನವಾಗಲಿಲ್ಲ. ಬಸವರಾಜ ಬೊಮ್ಮಾಯಿ ಅವರೇ ಗೃಹಮಂತ್ರಿ ನೀವೇ ಎಂದು ನೆನಪಿಸಬೇಕೇ? ಎಂದು ಕಾಂಗ್ರೆಸ್ ಲೇವಡಿ ಮಾಡಿದೆ.

ಯುವತಿ ತನ್ನ ಕುಟುಂಬವನ್ನು ಬೆದರಿಸಲಾಗುತ್ತಿದೆ ಎಂದು ಪದೇ ಪದೇ ಆರೋಪಿಸುತ್ತಿದ್ದಾರೆ. ತನ್ನ ಕುಟುಂಬಕ್ಕೆ ರಕ್ಷಣೆ ನೀಡಿ ಎಂದು ಅಂಗಲಾಚಿದ್ದಾರೆ. ಬಿಜಾಪುರದಲ್ಲಿದ್ದ ಯುವತಿ ಕುಟುಂಬ ಬೆಳಗಾವಿಯಲ್ಲಿ ದೂರು ದಾಖಲಿಸಿದೆ. ಬೆಳಗಾವಿಯಲ್ಲಿ ರಮೇಶ್ ಜಾರಕಿಹೊಳಿ ಅವರ ಬಾಡಿಗೆ ಪುಂಡರು ಪೊಲೀಸರು ಮತ್ತು ಕಾನೂನು ಕಸಕ್ಕೆ ಸಮಾನ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದರು.

## ಸಾರಿಗೆ ನೌಕರರು ಮುಷ್ಕರ ನಡೆಸದಂತೆ ಸವದಿ ಮನವಿ

ಬೆಂಗಳೂರು, ಮಾ.29 - ಸರ್ಕಾರಿ ನೌಕರರಂತೆ ಪರಿಗಣಿಬೇಕೆಂಬ ಸಾರಿಗೆ ನೌಕರರು ಇಟ್ಟಿರುವ ಬೇಡಿಕೆಯನ್ನು ಸದ್ಯಕ್ಕೆ ಬಿಟ್ಟಿದ್ದು, ಉಳಿದ 9 ಬೇಡಿಕೆಗಳನ್ನು ಈಡೇರಿಸುವ ಪ್ರಯತ್ನ ನಡೆದಿದೆ. ಹಾಗಾಗಿ ಪ್ರತಿಭಟನೆ ಹಾದಿ ಹಿಡಿಯಬಾರದೆಂದು ಉಪಮುಖ್ಯಮಂತ್ರಿ ಸವದಿ ಮನವಿ ಮಾಡಿಕೊಂಡಿದ್ದಾರೆ.

ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ವೇಳೆ ಸಾರಿಗೆ ನೌಕರರು ಮುಷ್ಕರದ ಹಾದಿ ಹಿಡಿದಿದ್ದೇ ಆದರೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆ ಎಂದೂ ತಿಳಿಸಿದ್ದಾರೆ. ಈಗಾಗಲೇ 8 ಬೇಡಿಕೆಗಳನ್ನು ಈಡೇರಿಸಿದ್ದೇವೆ. ಅಂತರ್ ನಿಗಮ ವರ್ಗಾವಣೆ, ಟಿ.ಎ. ಹೆಚ್ಚಳ ಬೇಡಿಕೆ ಈಡೇರಿಸಲಾಗಿದೆ. ಅವರ 9ನೇ ಬೇಡಿಕೆಯಾದ ಆರನೆ ವೇತನ ಆಯೋಗದ ವಿಚಾರ ಕುರಿತು ಚರ್ಚೆ ನಡೆಸಲಾಗಿದೆ. ಆರ್ಥಿಕ ಇಲಾಖೆ ಇದರ ಬಗ್ಗೆ ಎರಡು ದಿನಗಳಲ್ಲಿ ಪರಿಶೀಲನೆ ನಡೆಸಲಿದೆ. ಸಂಸ್ಥೆ ಮೇಲಾಗುವ ಹೊರೆ ಬಗ್ಗೆ ಲೆಕ್ಕಾಚಾರ ಮಾಡಲಿದೆ ಎಂದು ತಿಳಿಸಿದರು.

## ದೆಹಲಿ : ಪ್ರತಿಭಟನಾ ಸ್ಥಳದಲ್ಲೇ ರೈತರಿಂದ ಹೋಳಿ ಸಂಭ್ರಮ

ನವದೆಹಲಿ, ಮಾ. 29 - ದೆಹಲಿಯಲ್ಲಿ ಪ್ರತಿಭಟನಾ ನಿರತ ರೈತರು, ಸಿಂಘು, ಟಿಕ್ರಿ ಹಾಗೂ ಘಾಜಿಪುರ ಗಡಿಗಳಲ್ಲೇ ಓಕುಳಿ ಆಚರಿಸಿದ್ದಾರೆ.

ಕೃಷಿ ಕಾಯ್ದೆ ವಾಪಸ್ ಪಡೆದು, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಬೆಂಬಲ ನೀಡುವವರೆಗೂ ಪ್ರತಿಭಟನೆ ಮುಂದುವರೆಯಲಿದೆ ಎಂದು ರೈತ ಮುಖಂಡರು ತಿಳಿಸಿದ್ದಾರೆ. ಓಕುಳಿಯ ದಿನದಂದು ಪ್ರತಿಭಟನಾ ಸ್ಥಳದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿತ್ತು.

## ಮಸೀದಿ ಗೋಪುರ ಉರುಳಿ ಇಬ್ಬರು ಮಕ್ಕಳ ಸಾವು

ಮುಜಾಫರನಗರ, ಮಾ.29- ಉತ್ತರ ಪ್ರದೇಶದ ಶಾಮಿಲಿ ಜಿಲ್ಲೆಯಲ್ಲಿ ಮಸೀದಿಯೊಂದರ ಗೋಪುರ ಉರುಳಿ ಇಬ್ಬರು ಮಕ್ಕಳು ಸಾವನ್ನಪ್ಪಿದ ಹಾಗೂ ಓರ್ವ ಬಾಲಕ ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹತ್ತರಿಂದ ಹನ್ನೆರಡು ವರ್ಷದ ಮಕ್ಕಳು ಶಬ್ ಎ ಬರಾತ್ ಅಂಗವಾಗಿ ಭಾನುವಾರ ರಾತ್ರಿ ಮಸೀದಿಗೆ ತೆರಳಿದ್ದರು. ಆಗ ಗೋಪುರ ಉರುಳಿ ಖುರ್ಷಿದ್ ಹಾಗೂ ಮತ್ಲೂಬ್ ಎಂಬ ಬಾಲಕರು ಸಾವನ್ನಪ್ಪಿದ್ದಾರೆ. ಸಮೀರ್ ಎಂಬ ಬಾಲಕ ಗಾಯಗೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

## ಶಸ್ತ್ರಚಿಕಿತ್ಸೆಗಾಗಿ ಪವಾರ್ ದಾಖಲು

ಮುಂಬೈ, ಮಾ. 29 - ಎನ್.ಸಿ.ಪಿ. ಮುಖ್ಯಸ್ಥ ಶರದ್ ಪವಾರ್ ಅವರು ಪಿತ್ತಕೋಶ ಸಮಸ್ಯೆ ಕಾರಣದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

ಶರದ್ ಪವಾರ್ ಅವರ ಹೊಟ್ಟೆಯಲ್ಲಿ ನಿನ್ನೆ ನೋವು ಕಾಣಿಸಿಕೊಂಡಿತ್ತು. ಅವರನ್ನು ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಪಾಸಣೆ ನಡೆಸಿದಾಗ ಪಿತ್ತಕೋಶದಲ್ಲಿ ಸಮಸ್ಯೆ ಇರುವುದು ಪತ್ತೆಯಾಯಿತು ಎಂದು ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ತಿಳಿಸಿದ್ದಾರೆ.

## ಹೆಲಿಕಾಪ್ಟರ್ ಪತನದಲ್ಲಿ ಜೆಕ್ ಉನ್ನತ ಶ್ರೀಮಂತನ ಸಾವು

ಆಂಖೊರೇಜ್, ಮಾ.25- ಅಲಾಸ್ಕಾದಲ್ಲಿ ಪ್ರವಾಸಿಗರನ್ನು ವೈಮಾನಿಕ ಪ್ರವಾಸಕ್ಕೆ ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ಒಂದು ಪತನಗೊಂಡು ಜೆಕ್ ರಿಪಬ್ಲಿಕ್‌ನ ಅತ್ಯಂತ ಶ್ರೀಮಂತ ವ್ಯಕ್ತಿ ಸೇರಿದಂತೆ ಐವರು ಸಾವನ್ನಪ್ಪಿದ್ದಾರೆ.

ಹೆಲಿಕಾಪ್ಟರ್‌ನಲ್ಲಿದ್ದ ಓರ್ವ ವ್ಯಕ್ತಿ ಮಾತ್ರ ಬದುಕುಳಿದಿದ್ದು, ತೀವ್ರ ಗಾಯಗೊಂಡಿರುವ ಆತನನ್ನು ಅಲಾಸ್ಕಾದ ಆಂಖೊರೇಜ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಶನಿವಾರ ನಡೆದ ಅಪಘಾತದಲ್ಲಿ ಪೀಟರ್ ಕೆಲ್ನೋನರ್, ಬೆಂಜಮಿನ್ ಲೊರಕೆಕ್ಸ್, ಗ್ರಗೊರಿ ಹಾರ್ಮ್ಸ್, ಸಿನ್ ಮೆಕ್‌ಮೆನನಿ, ಗರ್ಡ್‌ವುಡ್ ಹಾಗು ಜೆಕೊರಿ ರಸೆಲ್ ಎಂಬುವವರು ಸಾವನ್ನಪ್ಪಿದ್ದಾರೆ.

ಕೆಲನರ್ ಅವರು ಜೆಕ್ ಉದ್ಯಮಿಯಾಗಿದ್ದು ಅವರ ಒಟ್ಟು ಆಸ್ತಿ ಮೌಲ್ಯ 17ಶತಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ. ಅವರು ಅಂತರರಾಷ್ಟ್ರೀಯ ಹೂಡಿಕೆ ಉದ್ಯಮವಾದ ಪಿಪಿಎಫ್‌ನಲ್ಲಿ ಶೇ.98.93ರಷ್ಟು ಪಾಲುದಾರಿಕೆ ಹೊಂದಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾರ್ಥಿ ಭವನ ಹತ್ತಿರ
ಹರ್ಷ ಬಾರ್ ಹಿಂಭಾಗದಲ್ಲಿ 30x40 South, 60x40 Corner, 30x40 Corner, 30x40 30x40 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 17 ಗುಂಟೆ ಜಮೀನು ಮೇನ್ ರೋಡ್ ಪಕ್ಕ, ಮಿಟ್ಲಕಟ್ಟೆ ಶಾಮನೂರು ರಸ್ತೆ, ಶಾಮನೂರಿಂದ 3 ಕಿ.ಮೀ ಇದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318, 95352 69849

**ಮನೆ ಲೀಜ್‌ಗೆ ಇದೆ**
ನಗರದ ಹೃದಯ ಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್‌ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1ನೇ ಮಹಡಿ ಮನೆ ಲೀಸ್‌ಗಿದೆ. ಸಂಪರ್ಕಿಸಿ
9741746205(Owner)
9902299961, 8431255250

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ, 30x50 ಉತ್ತರ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಉತ್ತರ ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಮನೆ ಬಾಡಿಗೆಗೆ ದೊರೆಯುತ್ತದೆ**
ಫಸ್ಟ್ ಫ್ಲೋರ್‌ನಲ್ಲಿ 2BHK ಮನೆ ಬೋರ್ ಹಾಗೂ ನಲ್ಲಿ ನೀರಿನ ಸೌಲಭ್ಯವಿದೆ. ವಿಳಾಸ: # 41 'A' ಬ್ಲಾಕ್, 5ನೇ ಮುಖ್ಯರಸ್ತೆ, ದೇವರಾಜ ಅರಸು ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ.
88927 46603

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x45 South 30x45 East, 30x50 West, 40x60 North, 45x30 North East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವಸ್ಥ ಹುಡುಗರು ಬೇಕಾಗಿದ್ದಾರೆ.
74117 79912
81529 46270

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಮಾರಾಟಕ್ಕಿದೆ**
ಚೌಕಿಪೇಟೆ ಮಹಾರಾಜಪೇಟೆ ವಿಠ್ಠಲ ಮಂದಿರದ ಹತ್ತಿರ 15x42 ಅಳತೆಯ ಹಳೆಯ ಹಂಚಿನ ಮನೆ ಮಾರಾಟಕ್ಕಿದೆ.
94838 62779

**15 ದಿನಗಳಲ್ಲಿ ಪರಿಹಾರ**
ಬಿಪಿ, ಷುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಬಾಡಿಗೆಗೆ**
15 ರೂಂಗಳು ಹಾಗೂ ವಿಶಾಲವಾದ ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಅಥವಾ ಕಾಲೇಜುಗಳಿಗೆ ಮೊದಲ ಆದ್ಯತೆ.
ಹೋಟೆಲ್ ಬಾಡಿಗೆಗೆ ಇದೆ
ಸರಸ್ವತಿ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ.
81055 42689, 97419 44456

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸ ಬೇಕಾದ ವಿಳಾಸ
ಸಾಕೇತ್ ಎಂಟರ್ ಪ್ರೈಸಸ್
ಪ್ಲಾಟ್ ನಂ: 5-E ಕರೂರ್ ಇಂಡಸ್ಟ್ರಿಯಲ್ ಏರಿಯಾ, ಡಿ.ಐ.ಸಿ. ಆಫೀಸ್ ಎದುರು, ದಾವಣಗೆರೆ
94826 71264

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ದಿ. 01.04.2021ರ ಗುರುವಾರ ಮತ್ತು 02.04.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED**
For Chcolate Shop. Gents/ Ladies, Having Experience in Super Market.
Contact : Cindrella
1st Stop Vidya Nagar, Davanagere.
74831 63876, 74112 88376

**TUITION FOR 7TH, 8TH, 9TH CLASSES**
(Maths, Science, Social)
Both State and CBSE Syllabus
KTJ Nagar, 2nd Main, 7th Cross, Davangere - 577 002.
Ph. : 74063 64767

**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವ ಇರುವ ಲೇಡಿ ಅಸಿಸ್ಟೆಂಟ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಯಾವುದೇ ಪದವಿ
ಕೆ.ಬಿ.ಆರ್ ಇಂಡಸ್ಟ್ರೀಸ್
ಆರ್.ಎಂ.ಸಿ.ಲಿಂಕ್ ರೋಡ್ ಮಹಾವೀರ ಭವನದ ಹತ್ತಿರ, ದಾವಣಗೆರೆ.
94484 42694

**SUKSHEMA HOSPITAL PVT. LTD.,**
COVID VACCINATION PROGRAM
Time : 10.00 to 4.00 pm
Monday to Saturday
Charges : Rs. 250/-
Contact No. : 08192-222310, 223863

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**SHOPS FOR RENT**
(with Wash Room Facility)
N.R. Road, Davanagere.
94483 69523

**ಜ್ಯೋತಿಷ್ಯ ಫಲ**
ನುಡಿದಂತೆ ನಡೆಯುವುದು
ಪಂಡಿತ್ ವಿಜಯ್‌ಕುಮಾರ್ ಗುರೂಜಿ
ವ್ಯಾಪಾರದಲ್ಲಿ ಲಾಭ-ನಷ್ಟ, ಗಂಡ-ಹೆಂಡತಿ ಕಲಹ, ಸಂತಾನ ಫಲ, ಗುಪ್ತ ಸಮಸ್ಯೆಗಳಿಗೆ ಅತೀ ಶೀಘ್ರದಲ್ಲಿ 101% ಗ್ಯಾರಂಟಿ ಪರಿಹಾರ. ಫೋನಿನ ಮೂಲಕ ನಿಮ್ಮ ಸ್ವರ ಭವಿಷ್ಯದಿಂದ ಪರಿಹಾರ ತಿಳಿಸುತ್ತಾರೆ.
99021 73302

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826


ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

## ಸುಭಿಕ್ಷಾ ಫೌಂಡೇಶನ್ ವತಿಯಿಂದ ಕೋವಿಡ್ 19 ಜಾಗೃತಿ ಅಭಿಯಾನ



ದಾವಣಗೆರೆ, ಮಾ.29 - ಸುಭಿಕ್ಷಾ ಫೌಂಡೇಶನ್ ವತಿಯಿಂದ ಕೋವಿಡ್ 19 ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಎಸ್. ಪಿ. ಹನುಮಂತ ರಾಯ ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿದರು.

ತಾಲ್ಲೂಕು ರೈತ ಭವನದ ಬಳಿ ತರಕಾರಿ ಮಾರುಕಟ್ಟೆ ಆವರಣದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಅಭಿಯಾನದಲ್ಲಿ 500 ಕ್ಕೂ ಹೆಚ್ಚು ಜನರಿಗೆ ಮಾಸ್ಕ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಹನುಮಂತರಾಯ ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ, ಎರಡನೇ ಅಲೆ ವೇಗವಾಗಿ ಹರಡುತ್ತಿದೆ.

ಆರೋಗ್ಯ ವಿಚಾರದಲ್ಲಿ ಮರೆವು ಇರಬಾರದು, ಮಾಸ್ಕ್ ಹಾಕಿಕೊಂಡು ಬರದಿದ್ದರೆ ದಂಡ ಕಟ್ಟಬೇಕಾಗುತ್ತದೆ ಎಂದು ಎಚ್ಚರಿಸಿದರು. ಎಸ್ಪಿ ಜೊತೆ ಸಂಸ್ಥೆ ಕಾರ್ಯದರ್ಶಿ, ಸೌಮ್ಯ ಮಂಜುನಾಥ್ ಜಾಧವ್, ಶ್ರೀಮತಿ ಆಶಾ ಮರಿಯೋಜಿರಾವ್, ಭಾಗ್ಯ ಪಿಸಾಳೆ, ಶ್ವೇತಾ ಸೋಮಶೇಖರ್ ಹಾಗೂ ಇತರೆ ಪದಾಧಿಕಾರಿಗಳು ಭಾಗವಹಿಸಿದ್ದರು.

## ಕೂಡ್ಲಿಗಿ : ನಿಷೇಧವಿದ್ದರೂ ಮಕ್ಕಳ ಹೋಳಿಗಿಲ್ಲ ತಡೆ



ಕೂಡ್ಲಿಗಿ, ಮಾ.29- ಪಟ್ಟಣದಲ್ಲಿ 2 ವಾರ್ಡ್‌ಗಳಿಗೆ ಚುನಾವಣೆ ಇದ್ದರೂ ಕೋವಿಡ್ ಹಿನ್ನೆಲೆಯಲ್ಲಿ ರಂಗಿನ ಹಬ್ಬ ಹೋಳಿ ನಿಷೇಧಿಸಲಾಗಿತ್ತು. ಆದರೂ ಮಕ್ಕಳು ಮಾತ್ರ ತಮ್ಮ ತಮ್ಮ ಬೀದಿಗಳಲ್ಲಿ ರಂಗು ರಂಗಿನ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

## ಕೊರೊನಾ ಪ್ರಯೋಗಾಲಯದಿಂದಲ್ಲ

**(1ನೇ ಪುಟದಿಂದ)** ವಿಳಂಬವಾಗಿದೆ. ಇದರಿಂದಾಗಿ ಚೀನಾ ಸೋಂಕು ಹರಡಿದ ಹೊಣೆ ತನ್ನ ಮೇಲೆ ಬರುವುದನ್ನು ತಡೆಯಲು ಅಧ್ಯಯನಕ್ಕೆ ಸಹಕರಿಸಿಲ್ಲ ಎಂಬ ಮಾತುಗಳೂ ಕೇಳಿ ಬರುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆಯ ಸದಸ್ಯ ದೇಶದ ರಾಯಭಾರಿಯೊಬ್ಬರ ಬಳಿ ಇರುವ ಮಾಹಿತಿ ಪಡೆದು ಎ.ಪಿ. ಸುದ್ದಿ ಸಂಸ್ಥೆಯು ವರದಿ ಪ್ರಕಟಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ಇನ್ನೂ ಅಧಿಕೃತವಾಗಿ ವರದಿ ಬಹಿರಂಗ ಪಡಿಸಿಲ್ಲ.

ಕೊರೊನಾ ವೈರಸ್ ನಾಲ್ಕು ವಿಧಗಳಲ್ಲಿ ಹರಡಿರುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ಗುರುತಿಸಲಾಗಿದೆ. ಅದರಲ್ಲಿ ಬಾವಲಿಯೊಂದರಲ್ಲಿ ಕಂಡು ಬರುವ ಕೊರೊನಾ ವೈರಸ್ ಇನ್ನೊಂದು ಪ್ರಾಣಿಯ ಮೂಲಕ ಮನುಷ್ಯರಿಗೆ ಬಂದಿರುವ ಸಾಧ್ಯತೆ ಹೆಚ್ಚಾಗಿದೆ ಎಂದು ತಿಳಿಸಲಾಗಿದೆ. ಶೀತಲೀಕರಣ ಘಟಕಗಳ ಮೂಲಕ ವೈರಸ್ ಹರಡಿರಬಹುದು ಎಂದೂ ಹೇಳಲಾಗುತ್ತಿದೆ.

ಬಾವಲಿಗಳು ಹಿಂದಿನಿಂದಲೂ ಕೊರೊನಾ ವೈರಸ್‌ಗೆ ಆಶ್ರಯವಾಗಿವೆ. ಆದರೆ ಬಾವಲಿ ಗಳಲ್ಲಿ ಕಂಡು ಬಂದಿರುವ ವೈರಸ್ ಹಾಗೂ ಕೊರೊನಾ ವೈರಸ್ ನಡುವೆ ಸಾಕಷ್ಟು ಅಂತರವಿದೆ. ಹೀಗಾಗಿ ನಡುವಿನ ಕೊಂಡಿ ಪತ್ತೆಯಾಗಿಲ್ಲ ಎಂದೂ ವರದಿ ಹೇಳಿದೆ. ಇದೇ ರೀತಿ ವೈರಸ್‌ಗಳು ಪೆಂಗೊಲಿನ್‌ನಲ್ಲೂ ಕಂಡುಬಂದಿವೆ. ಬೆಕ್ಕುಗಳೂ ಸಹ ವೈರಸ್ ಹರಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಡಬ್ಲ್ಯೂ.ಹೆಚ್.ಒ.ದ ಪರಿಣಿತರ ತಂಡ ಚೀನಾದ ವುಹಾನ್‌ಗೆ ಭೇಟಿ ಮಾಡಿದ್ದರ ಆಧಾರದ ಮೇಲೆ ಬಹುತೇಕ ವರದಿ ರೂಪಿಸಲಾಗಿದೆ.

ವರದಿ ಅಂತಿಮವಾಗಿದೆ, ವಾಸ್ತವಾಂಶಗಳನ್ನು ಮರು ಪರಿಶೀಲಿಸಿ ಭಾಷಾಂತರ ಮಾಡಲಾಗುತ್ತಿದೆ ಎಂದು ಅಧ್ಯಯನ ತಂಡದ ನೇತೃತ್ವ ವಹಿಸಿದ್ದ ಡಬ್ಲ್ಯೂ. ಹೆಚ್.ಒ. ಪರಿಣಿತ ಪಿಟರ್ ಬೆನ್ ಎಂಬಾರ್ಕ್ ತಿಳಿಸಿದ್ದಾರೆ.

2019ರ ಡಿಸೆಂಬರ್‌ನಲ್ಲಿ ವುಹಾನ್ ಮಾಂಸದ ಮಾರುಕಟ್ಟೆಯಲ್ಲಿ ಮೊದಲು ಕೊರೊನಾ ವೈರಸ್ ಕಂಡುಬಂದಿತ್ತು. ವೈರಸ್ ಇಲ್ಲೇ ಆರಂಭವಾಗಿತ್ತೇ ಎಂಬ ಬಗ್ಗೆಯೂ ವರದಿ ಅಂತಿಮ ನಿಲುವಿಗೆ ಬಂದಿಲ್ಲ.

## ಇಂದು ವಿವಿಧೆಡೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ

ಇಂದು ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಂದನಕೋವಿ, ಅಶೋಕನಗರ ಕ್ಯಾಂಪ್ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಬಾಡಾ ಗ್ರಾಮದ ಶಾಲಾ ಆವರಣದಲ್ಲಿ ಸ್ಮಾರ್ಟ್ ಕ್ಲಾಸ್, ಗಣಕ ಯಂತ್ರ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭ ನಡೆಯಲಿದೆ. ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಲಿಡ್‌ಕರ್ ಅಧ್ಯಕ್ಷ ಪ್ರೊ. ಎನ್. ಲಿಂಗಣ್ಣ ಸೇರಿದಂತೆ, ಅನೇಕ ಗಣ್ಯರು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

## ಸಿಡಿ : ನ್ಯಾಯಾಂಗ ತನಿಖೆಗೆ ಒಳಪಡಿಸಲಿ

ದಾವಣಗೆರೆ, ಮಾ.29- ಸಿಡಿ ಪ್ರಕರಣವನ್ನು ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆ ನಡೆಸುವಂತೆ ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆ ಹೇಳಿಕೆ ನೀಡಿ ಹಲವಾರು ದಿನಗಳಾದರೂ ಆರೋಪ ಎದುರಿಸುತ್ತಿರುವ ರಮೇಶ್ ಜಾರಕಿಹೊಳಿಯವರನ್ನು ಬಂಧಿಸದಿರುವುದು ದುರಂತ. ಕೂಡಲೇ ಜಾರಕಿಹೊಳಿ ಅವ ರನ್ನು ಬಂಧಿಸಬೇಕು. ಸಂತ್ರಸ್ತೆ ಹಾಗೂ ಅವರ ಕುಟುಂಬಕ್ಕೆ ಸೂಕ್ತ ಭದ್ರತೆ ನೀಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳು ಸಿಡಿ ಪ್ರಕರಣ ಕುರಿತು ಇಲ್ಲಿಯವರೆಗೂ ಯಾವ ಹೇಳಿಕೆಯನ್ನೂ ನೀಡದೇ ಇರುವುದು ಗಮನಿಸಿದರೆ, ಈ ಪ್ರಕರಣವನ್ನು ಮುಚ್ಚಿ ಹಾಕುವ ತಂತ್ರ ನಡೆಯುತ್ತಿದೆ ಎಂಬ ಅನುಮಾನಗಳು ಮೂಡಿ ಬರುತ್ತಿವೆ. ಸರ್ಕಾರ ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸಿ ತನ್ನನ್ನು ರಕ್ಷಿಸಿಕೊಳ್ಳುತ್ತಿದೆ ಎಂದು ಹೇಳಿದರು.

ಕರ್ನಾಟಕ ಪೊಲೀಸ್ ಇಲಾಖೆಗೆ ದೇಶದಲ್ಲಿಯೇ ಉತ್ತಮ ಗೌರವವಿತ್ತು. ಆದರೆ ಈ ಪ್ರಕರಣದಿಂದಾಗಿ ಇಲಾಖೆಗೆ ಕಳಂಕ ಬಂದಿದೆ ಎಂದರು.

ರಾಮರಾಜ್ಯದ ಹೆಸರಿನಲ್ಲಿ ರಾವಣ ರಾಜ್ಯ ನಡೆಯುತ್ತಿದೆ. ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಸರ್ಕಾರಕ್ಕೆ ಸ್ತ್ರೀ ಕಂಟಕ ಇದ್ದು, ಈ ಪ್ರಕರಣದಿಂದಲೇ ಸರ್ಕಾರ ತನ್ನ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಅವರ ವಾಹನ ತಡೆದು ಪ್ರತಿಭಟನೆ ನಡೆಸುವುದು, ಚಪ್ಪಲಿ ಎಸೆಯುವ ಕೃತ್ಯವನ್ನು ಜಿಲ್ಲಾ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ ಎಂದ ಬಸವರಾಜ್, ಡಿಕೆಶಿ ಅವರಿಗೆ ರಕ್ಷಣೆ ಕೊಡದೇ ಸರ್ಕಾರವೇ ಕಲ್ಲು ಹೊಡೆಸುತ್ತಿದೆ ಎಂದು ಆರೋಪಿಸಿದರು.

ಮುಂದಿನ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ನಾಯಕರ ಮೇಲೆ ಹಲ್ಲೆಗಳು ನಡೆದರೆ, ಬಿಜೆಪಿ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಬಸವರಾಜ್ ಎಚ್ಚರಿಸಿದರು.

ಜಿಲ್ಲಾ ಕಾಂಗ್ರೆಸ್ ವಕ್ತಾರ ಶಾಮನೂರು ಟಿ.ಬಸವರಾಜ್ ಮಾತನಾಡಿ, ಸಿಡಿ ಪ್ರಕರಣದ ಆರೋಪ ಹೊತ್ತಿರುವವರನ್ನು ಇಲ್ಲಿಯವರೆಗೆ ಬಂಧಿಸಲು ಸಾಧ್ಯವಾಗಿಲ್ಲ. ಸಂತ್ರಸ್ತೆಯನ್ನು ಪತ್ತೆ ಹಚ್ಚಲಾಗಿಲ್ಲ ಎಂದರೆ ಇದು ಗುಪ್ತಚರ ಇಲಾಖೆಯ ವೈಫಲ್ಯ ಎಂದರು. ತುರ್ತಾಗಿ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಸುಭಾನ್ ಸಾಬ್, ಕೆ.ಎಂ. ಮಂಜುನಾಥ್, ಹೆಚ್. ಇಮ್ತಿಯಾಜ್ ಬೇಗ್, ಲಿಯಾಖತ್ ಅಲಿ ಎಂ.ಕೆ., ಭಾಷಾ, ಡಿ.ಶಿವಕುಮಾರ್ ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಆರು ಗ್ರಾ.ಪಂ.ಗಳಿಗೆ ಶಾಂತಿಯುತ ಮತದಾನ



ರಾಣೇಬೆನ್ನೂರು, ಮಾ.29- ತಾಲ್ಲೂಕಿನ 6 ಗ್ರಾಮ ಪಂಚಾಯಿತಿಗಳಿಗೆ ಇಂದು, ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದವಿಲ್ಲದಂತೆ ಶಾಂತಿಯುತ ಚುನಾವಣೆ ನಡೆದಿದ್ದು, ಶೇ. 86.33 ರಷ್ಟು ಮತದಾನವಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಮತಗಟ್ಟೆ ಕೇಂದ್ರದಲ್ಲಿ ಮಾಸ್ಕ್ ಕಡ್ಡಾಯಗೊಳಿಸಲಾಗಿತ್ತು. ಮತದಾನಕ್ಕೆ ತೆರಳುವ ಪೂರ್ವದಲ್ಲಿ ಪ್ರತಿಯೊಬ್ಬರಿಗೂ ಕೈಗಳಿಗೆ ಸ್ಯಾನಿಟೈಸರ್ ಹಾಕಿದ ನಂತರವೇ ಒಳಕ್ಕೆ ಕಳುಹಿಸಲಾಗುತ್ತಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಮತಗಟ್ಟೆಗಳ ನೂರು ಮೀಟರ್ ಹೊರಗೆ ನಿಂತು, ಕೊನೆ ಕ್ಷಣದಲ್ಲಿ ಮತದಾರರನ್ನು ಓಲೈಸುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು. ಬೆಳಗ್ಗೆಯಿಂದಲೇ ಗ್ರಾಮೀಣ ಪ್ರದೇಶದ ಮತದಾರರು ಹೆಚ್ಚಿನ ಉತ್ಸಾಹದಿಂದ ತಮ್ಮ ಪ್ರತಿನಿಧಿಗಳ ಆಯ್ಕೆಗಾಗಿ ಮತಗಟ್ಟೆಗೆ ಆಗಮಿಸುತ್ತಿರುವುದು ಕಂಡುಬಂದಿತು. ತಹಸೀಲ್ದಾರ್ ಜಿ.ಎಸ್. ಶಂಕರ್ ನೇತೃತ್ವದಲ್ಲಿ ಚುನಾವಣಾಧಿಕಾರಿಗಳು ಮತಗಟ್ಟೆಗಳಗೆ ಭೇಟಿ ನೀಡಿ ಮತದಾನ ಪ್ರಕ್ರಿಯೆಯನ್ನು ವೀಕ್ಷಿಸಿದರು.

## ನಿರ್ಬಂಧದ ನಡುವೆಯೂ ಸರಳವಾಗಿ ಜರುಗಿದ ಕುಂಬಳೂರು ರಥೋತ್ಸವ



ಮಲೇಬೆನ್ನೂರು, ಮಾ.29 - ಸರ್ಕಾರದ ನಿರ್ಬಂಧದ ನಡುವೆಯೂ ಕುಂಬಳೂರು ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರ ರಥೋತ್ಸವವು ಸೋಮವಾರ ಮಧ್ಯಾಹ್ನ ಸಂಪ್ರದಾಯದಂತೆ ಸರಳವಾಗಿ ಜರುಗಿತು.

ಶ್ರೀ ಹನುಮಂತ ದೇವರ ರಥಕ್ಕೆ ತಹಶೀಲ್ದಾರ್ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಬೇಕಾಗಿತ್ತು. ಆದರೆ ರಾಜ್ಯದಲ್ಲಿ ಕೊರೊನಾ ಸೋಂಕು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಹೆಚ್ಚು ಜನ ಸೇರುವ ಜಾತ್ರೆ, ಹಬ್ಬ ಆಚರಣೆಗಳನ್ನು ನಿರ್ಬಂಧಿಸಿರುವುದರಿಂದ ಅಧಿಕಾರಿಗಳು ಭಾಗವಹಿಸದ ಕಾರಣ ಗ್ರಾಮಸ್ಥರು ಪ್ರತಿ ವರ್ಷದ ಪದ್ಧತಿಯಂತೆ ರಥಕ್ಕೆ ಪೂಜೆ ಸಲ್ಲಿಸಿ, ಎರಡು ಹೆಜ್ಜೆ ಮಾತ್ರ ರಥ ಎಳೆದರು.

ನಿಟ್ಟೂರು ಆಂಜನೇಯ ಸ್ವಾಮಿ ಗ್ರಾಮದ ಬಸವೇಶ್ವರ, ಬೀರಲಿಂಗೇಶ್ವರ, ಭೂತಪ್ಪ ಸೇರಿದಂತೆ ಎಲ್ಲಾ ದೇವರುಗಳ ಸಮ್ಮುಖದಲ್ಲಿ ನೆರವೇರಿದ ಸರಳ ರಥೋತ್ಸವಕ್ಕೆ ಸ್ವಲ್ಪ ಜನ ಸಾಕ್ಷಿಯಾದರು.

ಈ ಬಾರಿ ಅನ್ನ ಸಂತರ್ಪಣೆಯನ್ನು ರದ್ದು ಪಡಿಸಲಾಗಿತ್ತು, ಜಾತ್ರೆಯ ವಾತಾವರಣ ಎಂದಿನಂತೆ ಇತ್ತು. ಜನರಲ್ಲಿ ಹಬ್ಬದ ಸಂಭ್ರಮ ಇತ್ತಾದರೂ ಹೆಚ್ಚು ಜನರ ಓಡಾಟ ಕಂಡು ಬರಲಿಲ್ಲ. ರಥೋತ್ಸವದ ನಂತರ ಭಕ್ತಾದಿಗಳಿಂದ ಹರಕೆ, ಬಾಯಿ ಬೀಗ, ಕಿವಿ ಚುಚ್ಚುವುದು, ಜವಳ, ದಿಂಡು ಉರುಳು ಸೇವೆ ನಡೆದವು ದೇವಸ್ಥಾನಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಮಂಗಳವಾರ ಸಂಜೆ ಸಂಪ್ರದಾಯದಂತೆ ಶ್ರೀ ಹನುಮಂತ ದೇವರ ಮುಳ್ಳೋತ್ಸವ ಸರಳವಾಗಿ ನಡೆಯ ಬಹುದೆಂದು ಹೇಳಲಾಗಿದೆ.

**ಬೆಳ್ಳಿ ಬೆತ್ತ ಕೊಡುಗೆ:** ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಗೆ ರೈಸ್ ಮಿಲ್ ಮಾಲೀಕರಾದ ವೈ. ವಿರೂಪಾಕ್ಷಪ್ಪ ಮತ್ತು ಶ್ರೀಮತಿ ಗಂಗಮ್ಮ ಬೆಳ್ಳಿ ಬೆತ್ತವನ್ನು ಕೊಡುಗೆಯಾಗಿ ನೀಡಿದರು.

## ಪಾಲಿಕೆ ಉಪ ಚುನಾವಣೆ: ಶೇ.56.71ರಷ್ಟು ಮತದಾನ

**(1ನೇ ಪುಟದಿಂದ)** ಮುಖ್ಯವಾಗಿದ್ದ ಹಿನ್ನೆಲೆಯಲ್ಲಿ ಎರಡೂ ಪಕ್ಷಗಳ ಮುಖಂಡರು, ಪಾಲಿಕೆ ಸದಸ್ಯರು ಚುನಾವಣೆ ನಡೆಯುವ ವಾರ್ಡ್‌ಗಳಲ್ಲಿ ಬೀಡು ಬಿಟ್ಟಿದ್ದರು.

ಮತ ಚಲಾಯಿಸಲು ಮತಗಟ್ಟೆಗಳಿಗೆ ಆಗಮಿಸುತ್ತಿದ್ದ ಮತದಾರರಿಗೆ ಮುಖಂಡರುಗಳು ಕೈ ಮುಗಿದು ತಮ್ಮ ತಮ್ಮ ಪಕ್ಷಗಳಿಗೆ ಮತ ನೀಡುವಂತೆ ಅಂತಿಮವಾಗಿ ಮನವಿ ಮಾಡುತ್ತಿದ್ದುದು ಕಂಡು ಬಂತು. ಪಕ್ಷಗಳ ಕಾರ್ಯಕರ್ತರು ಮತದಾನಕ್ಕೆ ಬರುತ್ತಿದ್ದವರಿಗೆ ಮಾಸ್ಕ್ ನೀಡುತ್ತಿದ್ದರು.

ಭಾರತ್ ಕಾಲೋನಿಯಲ್ಲಿ ಮಾಸ್ಕ್ ಧರಿಸದೇ ಮತದಾನ ಮಾಡಲು ಬಂದವರನ್ನು ಪೊಲೀಸರು ಮಾಸ್ಕ್ ಧರಿಸಿಕೊಂಡು ಬರುವಂತೆ ಹೇಳಿ ವಾಪಾಸ್ ಕಳುಹಿಸುತ್ತಿದ್ದರು.

ಕೆಲವು ಯುವ ಮತದಾರರು ಬಣ್ಣದಾಟ ವಾಡಿಯೇ ಮತ ಚಲಾಯಿಸಿದರು. ಪ್ರತಿ ಮತವೂ ಅತ್ಯಮೂಲ್ಯ ಎಂದರಿತ ಮುಖಂಡರುಗಳು, ಮನೆಯ ಸದಸ್ಯರನ್ನು ಮತ ಕೇಂದ್ರಕ್ಕೆ ಕರೆ ತರುವಂತೆ ಯುವಕರಿಗೆ ಹೇಳಿ ಕಳುಹಿಸುತ್ತಿದ್ದರು. ಯುವಕರು ಬೈಕ್‌ಗಳಲ್ಲಿ ಮಹಿಳೆಯರು, ವೃದ್ಧರನ್ನು ಮತ ಕೇಂದ್ರಗಳಿಗೆ ಕರೆ ತರುತ್ತಿದ್ದರು.

**ಮಾತಿನ ಚಕಮಕಿ:** ಈ ಹಿಂದೆ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾಗಿ ಮೇಯರ್ ಚುನಾವಣೆ ವೇಳೆ ರಾಜೀನಾಮೆ

ಪಾಲಿಕೆ ಸದಸ್ಯ ಸ್ಥಾನಕ್ಕೆ ಮತ್ತು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿರುವ ದೇವರಮನೆ ಶಿವಕುಮಾರ್ ಅವರು ಭಾರತ್ ಕಾಲೋನಿಗೆ ಬಂದಾಗ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವಾಗ್ವಾದ ನಡೆಯಿತು. ಎರಡೂ ಪಕ್ಷಗಳ ಕಾರ್ಯಕರ್ತರು ತಮ್ಮ ತಮ್ಮ ಪಕ್ಷಕ್ಕೆ ಜೈಕಾರ ಕೂಗಿದರು. ಪೊಲೀಸರು ಬಂದು ವಾತಾವರಣ ವಿಕೋಪಕ್ಕೆ ಹೋಗದಂತೆ ನೋಡಿಕೊಂಡ ಘಟನೆ ನಡೆದಿದೆ.

**ಫೋಟೋ ತೆಗೆದುಕೊಂಡ ಮಹಿಳೆ:** ಕಾಂಗ್ರೆಸ್ ಮಹಿಳಾ ಕಾರ್ಯಕರ್ತೆಯೊಬ್ಬರು ಮತಗಟ್ಟೆಯಲ್ಲಿ ಫೋಟೋ ತೆಗೆದುಕೊಂಡು ಪರಿಣಾಮ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ ಘಟನೆ 22ನೇ ವಾರ್ಡ್‌ನಲ್ಲಿ ನಡೆದಿದೆ. ಮಹಿಳೆ ವಿರುದ್ಧ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದಾರೆ ಎನ್ನಲಾಗಿದೆ.

## ಇಂದು ರೇಣುಕಾಚಾರ್ಯರ ಜಯಂತಿ



ಅಖಿಲ ಭಾರತ ಜಂಗಮ ಮಹಾಸಭಾದ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವ ಇಂದು ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನ ಶ್ರೀ ಡಾ. ಸದ್ಯೋಜಾತ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 6 ಕ್ಕೆ ರೇಣುಕಾ ಮಂದಿರದಲ್ಲಿ ಅಭಿಷೇಕ, 8.30 ಕ್ಕೆ ರೇಣುಕಾ ಮಂದಿರದಿಂದ ಶ್ರೀ ಸದ್ಯೋಜಾತ ಮಠದವರೆಗೆ ಕುಂಭ ಮೆರವಣಿಗೆ ನಡೆಯುವುದು. ನಂತರ ಬೆಳಿಗ್ಗೆ 11 ಕ್ಕೆ ಅದ್ಧೂರಿ ಕಾರ್ಯಕ್ರಮ ನಡೆಯುವುದು.

ಪುರವರ್ಗ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 5 ಕ್ಕೆ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮ ಶ್ರೀ ಡಾ. ಸದ್ಯೋಜಾತ ಮಠದಲ್ಲಿ ನೆರವೇರಿಸಲಾಗುವುದು.

ವಿವರಗಳಿಗೆ ಬಿ.ಎಂ. ವಾಗೀಶಯ್ಯ (99804 59146), ದ್ರಾಕ್ಷಾಯಿಣಮ್ಮ (94484 43095), ಉಮೇಶ್ ಹೆಚ್.ಎಂ. (83173 19625) ಮತ್ತು ಶಶಿಕಲಾ (98444 27260) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ನಗರದಲ್ಲಿ ಇಂದು ರಾಜ್ಯ ಮತ್ತು ಅಂತರರಾಜ್ಯ ಮಟ್ಟದ ಜಂಗೀ ಕುಸ್ತಿಗಳು

ಪೈ. ವೀರೇಶ್ ಅಭಿಮಾನಿ ಬಳಗದ ವತಿಯಿಂದ ಮಾಜಿ ಶಾಸಕ ದಿ. ಕೆ. ಮಲ್ಲಪ್ಪನವರ ಸವಿನೆನಪಿಗಾಗಿ ಹಾಗೂ ಪಾಲಿಕೆ ಸದಸ್ಯ ಪೈ. ಕೆ.ಎಂ. ವೀರೇಶ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಇಂದು ರಾಜ್ಯ ಮತ್ತು ಅಂತರರಾಜ್ಯ ಮಟ್ಟದ 24 ಜೊತೆ ಜಂಗೀ ಬಯಲು ಕುಸ್ತಿಗಳು ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ಕುಸ್ತಿ ಅಖಾಡದಲ್ಲಿ ನಡೆಯಲಿವೆ.

ಮಧ್ಯಾಹ್ನ 2.30 ಕ್ಕೆ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎ. ರವೀಂದ್ರನಾಥ್ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ಮಹಾಂತೇಶ್ ಬೀಳಗಿ, ರಾಜನಹಳ್ಳಿ ಶಿವಕುಮಾರ್, ಯಶವಂತರಾವ್ ಜಾಧವ್, ಎಸ್.ಟಿ. ವೀರೇಶ್, ವಿಶ್ವನಾಥ್ ಮುದಜ್ಜಿ, ಕೆ.ಎಂ. ಸುರೇಶ್, ದಾಸಕರಿಯಪ್ಪ, ಬಿ. ವೀರಣ್ಣ, ಡಿ. ಮಾಲತೇಶ್ ಜಾಧವ್, ಅಯೂಬ್ ಪೈಲ್ವಾನ್, ಹೆಚ್. ಮಹೇಶ್, ರವೀಂದ್ರ ಕುರುಬಗಟ್ಟಿ, ಸಿದ್ದೇಶ್ ಭಾಗವಹಿಸುವರು. ಬಿ. ವೀರಣ್ಣ, ಡಿ. ಮಾಲತೇಶ್ ಜಾಧವ್, ಖಂಡೋಜಿರಾವ್, ಮನೋಹರ್, ಸ್ಟಾರ್ ವೀರಣ್ಣ, ವಿನಾಯಕ ಪೈಲ್ವಾನ್, ಶಿವಾನಂದ್ ಕೋಚ್, ಶ್ರೀನಿವಾಸ್ ದಾಸಕರಿಯಪ್ಪ, ಸಾಧಿಕ್ ಪೈಲ್ವಾನ್ ಕುಸ್ತಿ ತೀರ್ಪುಗಾರರಾಗಿದ್ದಾರೆ.

## ಇಂದು 'ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ' ಸಮಾರಂಭದ ನೇರಪ್ರಸಾರ

ಕರ್ನಾಟಕದಾದ್ಯಂತ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರನ್ನು ಗೌರವಿಸುವ ವಿಭಿನ್ನ ಕಾರ್ಯಕ್ರಮ 'ಕರ್ನಾಟಕ ವುಮೆನ್ ಎಕ್ಸಲೇನ್ಸ್ ಅವಾರ್ಡ್-2021' ಇಂದು ಸಂಜೆ 6.30 ಕ್ಕೆ ದಾವಣಗೆರೆಯಿಂದ ಫೇಸ್‌ಬುಕ್‌ನಲ್ಲಿ ನೇರ ಪ್ರಸಾರವಾಗಲಿದೆ.

ಇದರಲ್ಲಿ 25 ಮಹಿಳಾ ಸಾಧಕಿಯರಿಗೆ ಪ್ರಶಸ್ತಿ ಪ್ರದಾನದ ಜೊತೆ ಹೆಸರಾಂತ ಕಲಾವಿದರಿಂದ ಸಂಗೀತ ನೃತ್ಯದ ರಸದೌತಣ ಪ್ರಸಾರವಾಗಲಿದೆ.

ಈ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗಾಗಿ ಚಿರಂತನ ಅಕಾಡೆಮಿ ಫೇಸ್ ಬುಕ್ ಪೇಜ್ ಲಿಂಕ್‌ನ್ನು ಬಳಸಿ https://fb.me/e/23HjZrHnE.

## ಲಾಕ್ ಮಾಡಲ್ಲ ಶಾಲೆಗೆ ರಜೆ ಇಲ್ಲ

**(1ನೇ ಪುಟದಿಂದ)** ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಗುಂಪುಗೂಡುವುದನ್ನು ತಡೆಗಟ್ಟಿ. ಕೋವಿಡ್ ನಿಯಂತ್ರಣಕ್ಕೆ ಸಹಕರಿಸಬೇಕು.

ಎಲ್ಲ ಅರ್ಹ ನಾಗರಿಕರೂ ಲಸಿಕೆ ಹಾಕಿಸಿಕೊಳ್ಳಬೇಕು. ಆ ಮೂಲಕ ಕೋವಿಡ್ ನಿಯಂತ್ರಣಕ್ಕೆ ಕೈ ಜೋಡಿಸುವಂತೆ ಕಳಕಳಿಯ ಮನವಿ ಮಾಡುತ್ತೇನೆ ಎಂದವರು ಹೇಳಿದ್ದಾರೆ.

ಶಿಕ್ಷಕರಿಗೂ ಕೋವಿಡ್ ಲಸಿಕೆ ಹಾಕಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.

ಯಾವುದೇ ರೀತಿಯ ಲಾಕ್ ಡೌನ್ ಮಾಡುವುದಿಲ್ಲ. ವಿರೋಧ ಪಕ್ಷದ ನಾಯಕರು ಪತ್ರ ಬರೆದು ಸಲಹೆ ನೀಡಿದ್ದಾರೆ. ಈ ಕುರಿತು ಚರ್ಚಿಸಲಾಯಿತು ಎಂದು ಯಡಿಯೂರಪ್ಪ ಹೇಳಿದ್ದಾರೆ.

### ಬೆಂಗಳೂರಿನಲ್ಲಿ ಕೊರೊನಾ ನಿಯಂತ್ರಣಕ್ಕೆ ಕ್ರಮ

ಬೆಂಗಳೂರಿನಲ್ಲಿ ಕೊರೊನಾ ಹೆಚ್ಚಳವಾಗುತ್ತಿರುವುದನ್ನು ನಿಯಂತ್ರಿಸಲು, ಸೋಂಕಿತರ ಸಂಪರ್ಕದಲ್ಲಿರುವವರ ಹೆಚ್ಚಿನ ಪ್ರಮಾಣದಲ್ಲಿ ಪತ್ತೆ ಹಾಗೂ ಕೊವಿಡ್ ಕೇರ್ ಸೆಂಟರ್‌ಗಳ ಸ್ಥಾಪನೆ ಸೇರಿದಂತೆ ಹಲವಾರು ಕ್ರಮಗಳಿಗೆ ನಿರ್ಧರಿಸಲಾಗಿದೆ.

ಈಗಾಗಲೇ ಹೆಚ್.ಎ.ಎಲ್. ಮತ್ತು ಹಜ್ ಭವನಗಳಲ್ಲಿ ತಲಾ 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರುಗಳನ್ನು ತೆರೆಯಲಾಗಿದೆ. ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿಯೂ 250 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಏಪ್ರಿಲ್ 5 ರಿಂದ ಕಾರ್ಯಾರಂಭ ಮಾಡಲು ಸಜ್ಜುಗೊಳಿಸಲಾಗುತ್ತಿದೆ.

ಸಂಪರ್ಕಿತರ ಪತ್ತೆಗೆ ಕಂದಾಯ, ಶಿಕ್ಷಣ ಇಲಾಖೆ ಸಿಬ್ಬಂದಿಯನ್ನೂ ಬಳಸಿಕೊಳ್ಳಲಾಗುತ್ತಿದೆ. ಸಂಪರ್ಕಿತರ ಪತ್ತೆಯ ಗುರಿಯನ್ನು ಸಹ 30ಕ್ಕೆ ಹೆಚ್ಚಿಸಲು ಸೂಚಿಸಲಾಗಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ 1166 ಬೆಡ್‌ಗಳನ್ನು ಮೀಸಲಿಡಲಾಗಿದ್ದು, ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಹಾಸಿಗೆಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು. ಖಾಸಗಿ ಆಸ್ಪತ್ರೆಗಳೂ ಸಹಕರಿಸುವಂತೆ ಹಾಗೂ ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳನ್ನು ಒದಗಿಸಲು ಸಿದ್ಧರಿರುವಂತೆ ತಿಳಿಸಲಾಗಿದೆ.

## ನಾಳೆ ಬಂಜಾರ ರಕ್ಷಣಾ ವೇದಿಕೆಯ ಉದ್ಘಾಟನೆ

ಕೊಟ್ಟೂರು, ಮಾ.29 - ಕರ್ನಾಟಕ ಬಂಜಾರ ರಕ್ಷಣಾ ವೇದಿಕೆಯ ಕೊಟ್ಟೂರು ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭವು ನಾಡಿದ್ದು ದಿನಾಂಕ 31ರ ಬುಧವಾರ ಜರುಗಲಿದೆ ಎಂದು ಸಂಘದ ಗೌರವಾಧ್ಯಕ್ಷ ಕುಟ್ಯಾನಾಯ್ಕ್ ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಎಸ್. ಭೀಮನಾಯ್ಕ್ ಮಾಡಲಿದ್ದು , ಮುಖ್ಯ ಅತಿಥಿಗಳಾಗಿ ಕುಡಚಿ ಶಾಸಕ ಪಿ. ರಾಜೀವ್, ಮಾಜಿ ಶಾಸಕ ನೇಮಿರಾಜ್ ನಾಯ್ಕ್, ಚಂದ್ರನಾಯ್ಕ್, ಜಿ.ಪಂ. ಸದಸ್ಯರಾದ ಎಂ.ಎಂ.ಜೆ. ಹರ್ಷವರ್ಧನ್, ಪಿ.ಎಚ್. ಉಮಾದೇವಿ, ಆರ್.ಎಂ.ಕೆ. ಸ್ಕೂಲ್ ಅಧ್ಯಕ್ಷ ಜಿ.ಟಿ. ಕೇಶವ ಪ್ರಸಾದ್, ತಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್ ನಾಯ್ಕ್, ಟಿ.ಎಚ್.ಬದ್ಯಾನಾಯ್ಕ್, ಡಾ. ಸುಲೋಚನಾ ಬಾಯಿ, ತಹಶೀಲ್ದಾರ್ ಜಿ.ಅನಿಲ್‌ಕುಮಾರ್, ತಾ.ಪಂ. ಅಧ್ಯಕ್ಷ ಎಸ್. ಗುರುಮೂರ್ತಿ, ಪ.ಪಂ. ಅಧ್ಯಕ್ಷೆ ಶ್ರೀಮತಿ ಭಾರತಿ ಸುಧಾಕರ್ ಪಾಟೀಲ್, ಸಿಪಿಐ ದೊಡ್ಡಪ್ಪ, ಪಿ.ಎಸ್.ಐ. ನಾಗಪ್ಪ ಮುಂತಾದವರು ಆಗಮಿಸಲಿದ್ದಾರೆ.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಕೆ. ದೇವೇಂದ್ರಪ್ಪ, ಎ.ಎಸ್.ನಾಯ್ಕ್ ಅಧ್ಯಕ್ಷ ಎಲ್. ಭೀಮಾನಾಯ್ಕ್ ಇದ್ದರು.

## ಹರಪನಹಳ್ಳಿ : ಕಂಚಿಕೇರಿ ಶೇ.84, ಮತ್ತಿಹಳ್ಳಿ ಶೇ.80 ಮತದಾನ



ಹರಪನಹಳ್ಳಿ, ಮಾ.29- ತಾಲ್ಲೂಕಿನ ಎರಡು ಕಡೆ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕಂಚಿಕೇರಿ ಶೇ.84.12 ಹಾಗೂ ಮತ್ತಿಹಳ್ಳಿಯಲ್ಲಿ ಶೇ. 80.12 ರಷ್ಟು ಮತದಾನವಾಗಿದೆ.

ಕಂಚಿಕೇರಿಯಲ್ಲಿ 7,510 ಮತದಾರರಲ್ಲಿ ಪುರುಷ-3,272 ಹಾಗೂ ಮಹಿಳಾ ಮತದಾರರ-3051 ಸೇರಿ, ಒಟ್ಟು 6,323 ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ. ಮತ್ತಿಹಳ್ಳಿಯಲ್ಲಿ ಒಟ್ಟು 2,098 ಮತದಾರರಲ್ಲಿ ಪುರುಷ ಮತದಾರರು-871 ಮಹಿಳೆಯರು-810 ಒಟ್ಟು 1,681ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ.

ಕಂಚಿಕೇರಿ ಗ್ರಾ.ಪಂ.ನ ಅಧಿಕಾರ ಅವಧಿ ಇತ್ತೀಚೆಗೆ ಮುಕ್ತಾಯ ಗೊಂಡಿತ್ತು. ಮತ್ತಿಹಳ್ಳಿಯಲ್ಲಿ ಈ ಹಿಂದೆ ನಡೆದ ಚುನಾವಣೆಯಲ್ಲಿ 7 ಸ್ಥಾನಗಳಿಗೆ ನಿಯೋಜಿಸಿದ್ದ ಮತಗಟ್ಟೆಗಳಲ್ಲಿ ವಾರ್ಡ್‌ಗಳ ಮತ ಪತ್ರ ಅದಲು ಬದಲಾಗಿವೆ ಎಂದು ಆರೋಪಿಸಿ, ಮತದಾರರು ಚುನಾವಣೆ ಬಹಿಷ್ಕರಿಸಿದ್ದರಿಂದ 7 ಸ್ಥಾನಗಳಿಗೆ ಮಾತ್ರ ಈಗ ಚುನಾವಣೆ ಜರುಗಿದೆ. ಕಂಚಿಕೇರಿ ಗ್ರಾ.ಪಂ.ಗೆ ಮಹೇಶ ಪೂಜಾರ ಚುನಾವಣಾಧಿಕಾರಿಯಾಗಿ, ಉದಯಶಂಕರ್ ಸಹಾಯಕ ಚುನಾವಣಾಧಿಕಾರಿಯಾಗಿ, ಮತ್ತಿಹಳ್ಳಿ ಗ್ರಾ.ಪಂ.ಗೆ ಶಿವಯೋಗಿ ಚುನಾವಣಾಧಿಕಾರಿಯಾಗಿ, ಸಹಾಯಕ ಚುನಾವಣಾಧಿಕಾರಿಯಾಗಿ ಕಬೀರನಾಯ್ಕ ಕರ್ತವ್ಯ ನಿರ್ವಹಿಸಿದರು. ತಹಶೀಲ್ದಾರ್ ನಂದೀಶನಾಯ್ಕ 2 ಗ್ರಾ.ಪಂ.ಗೆ ಭೇಟಿ ನೀಡಿ ಪರಿಶೀಲಿಸಿದರು.

## ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ, ಮಾ.29- ವಿಎಸ್‌ಎಸ್ ಎಂಟರ್‌ಪ್ರೈಸಸ್ ವತಿಯಿಂದ ಶ್ರೀ ಮಲ್ಲಿಕಾರ್ಜುನ ಕೈಗಾರಿಕಾ ತರಬೇತಿ ಕೇಂದ್ರದ ಸಹಯೋಗದಲ್ಲಿ ಹೋಂಡಾ ಕಂಪನಿಯಲ್ಲಿ ಕೆಲಸಕ್ಕಾಗಿ ನಾಡಿದ್ದು ದಿನಾಂಕ 31 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಶಂಕರ್ ವಿಹಾರ ಬಡಾವಣೆಯ ಶ್ರೀ ಮಲ್ಲಿಕಾರ್ಜುನ ಐಟಿಐ ಸಂಸ್ಥೆಯಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಐಟಿಐ ಮೂಲ ಅಂಕ ಪಟ್ಟಿ, ಬಯೋಡೇಟಾ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ನಕಲು ಪ್ರತಿ, 3 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಸಂದರ್ಶನಕ್ಕೆ ಹಾಜರಾಗುವಂತೆ ಶ್ರೀ ಮಲ್ಲಿಕಾರ್ಜುನ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಂಶುಪಾಲರು ತಿಳಿಸಿದ್ದಾರೆ.

ವಿವರಗಳಿಗೆ ಮೊ: 99803 02940, 99726 01226 ಗೆ ಸಂಪರ್ಕಿಸಿ.

## ಹರಿಹರ: ಅಬ್ಬರವಿಲ್ಲದ ಸರಳ ಹೋಳಿ



ಹರಿಹರ, ಮಾ.29- ನಗರದಲ್ಲಿ ಈ ಬಾರಿ ಹೋಳಿ ಹಬ್ಬವು ಡಿಜೆ ಸೌಂಡ್ ಸಿಸ್ಟಮ್ ಅಬ್ಬರವಿಲ್ಲದೆ ಮಡಿಕೆ, ಹೊಡೆಯದೆ, ಗುಂಪು ಗುಂಪಾಗಿ ಆಚರಣೆ ಮಾಡದೆ ಸರಳ ರಂಗು ರಂಗಿನ ಹೋಳಿ ಹಬ್ಬವನ್ನು ಆಚರಣೆ ಮಾಡಲಾಯಿತು.

ನಗರದಲ್ಲಿ ಹೋಳಿ ಹಬ್ಬ ಬಂತು ಎಂದರೆ ಯುವಕ, ಯುವತಿಯರು ಎಗ್ಗಿಲ್ಲದೆ ಬಣ್ಣವನ್ನು ಪರಸ್ಪರ ಎರಚುವ ಜೊತೆಗೆ ತಲೆಗೆ ಮೊಟ್ಟೆ ಹೊಡೆದುಕೊಂಡು ನಂತರದಲ್ಲಿ ಎಲ್ಲರೂ ಒಂದೆಡೆ ಗುಂಪಾಗಿ ಸೇರಿ ಹಲಗೆ ಬಾರಿಸುತ್ತಾ ಡಿಜೆ ಸದ್ದಿಗೆ, ತಾಳಕ್ಕೆ ಹೆಜ್ಜೆಗಳನ್ನು ಹಾಕಿ ಕುಣಿದು ಕುಪ್ಪಳಿಸುತ್ತಾ ಮೈಮೇಲೆ ಒಬ್ಬರಿಗೊಬ್ಬರು ಬಣ್ಣದ ನೀರು ಎರಚಿಕೊಂಡು ಸಂತಸದಿಂದ ಹೋಳಿ ಆಚರಣೆ ಮಾಡುತ್ತಿದ್ದರು.

ದೂರ ಇರುವ ಗೆಳೆಯರ ಮನೆಗಳಿಗೆ ಬೈಕ್‌ನಲ್ಲಿ ಯುವಕ, ಯುವತಿಯರು ಹೋಗಿ ಬಣ್ಣವನ್ನು ಪರಸ್ಪರ ಹಚ್ಚಿಕೊಂಡು ಬರುತ್ತಿದ್ದರು.

ನಗರದ ಹವಳದ ಬೀದಿ, ಕೋಟೆ ಬಡಾವಣೆ, ಹೊಸಭರಂಪುರ ಬಡಾವಣೆ, ಹೈಸ್ಕೂಲ್ ಬಡಾವಣೆ, ನಡವಲಪೇಟೆ, ವಿಜಯನಗರ ಬಡಾವಣೆ ಸೇರಿದಂತೆ, ಇನ್ನಿತರೆ ಬಡಾವಣೆಯ ಪ್ರಮುಖ ವೃತ್ತಗಳಲ್ಲಿ ಮಡಿಕೆ ಒಡೆಯಲು ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಕೊರೊನಾ ಹರಡುವ ಹಿನ್ನೆಲೆಯಲ್ಲಿ ಸರ್ಕಾರ ಕೆಲವು ನಿರ್ಬಂಧಗಳನ್ನು ಹೇರಿದೆ. ಹಾಗಾಗಿ ಯುವಕ, ಯುವತಿಯರು ತಮ್ಮ ತಮ್ಮ ಮನೆಯ ಹತ್ತಿರವಿರುವ ಸ್ನೇಹಿತರಿಗೆ, ಸಂಬಂಧಿಕರಿಗೆ ಬಣ್ಣವನ್ನು ಎರಚುವ ಮೂಲಕ ಹೋಳಿ ಹಬ್ಬವನ್ನು ಆಚರಣೆ ಮಾಡಿದರು.

ನಗರದ ಮುಖ್ಯ ರಸ್ತೆ, ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಹೆಚ್. ಶಿವಪ್ಪ ಸರ್ಕಲ್, ಹರಪನಹಳ್ಳಿ ರಸ್ತೆ, ಪಿ.ಬಿ. ರಸ್ತೆ, ತರಕಾರಿ ಮಾರುಕಟ್ಟೆ ಸೇರಿದಂತೆ ಹಲವಾರು ವ್ಯಾಪಾರ ಕೇಂದ್ರಗಳಲ್ಲಿರುವ ಅಂಗಡಿಗಳನ್ನು ಬೆಳಿಗ್ಗೆ ಬಂದ್ ಆಗಿ ನಂತರ ಸಂಜೆ ತೆರೆದುಕೊಂಡು ವ್ಯಾಪಾರ, ವಹಿವಾಟು ನಡೆಸಿದವು.

ಬಿಸಿಲಿನ ತಾಪ ಹೆಚ್ಚಿನ ಪ್ರಮಾಣದಲ್ಲಿ ಇದ್ದ ಪರಿಣಾಮವಾಗಿ ಕಲ್ಲಂಗಡಿ, ದ್ರಾಕ್ಷಿ, ದಾಳಿಂಬೆ ಹಣ್ಣು ಹಾಗೂ ತಂಪಾದ ಪಾನೀಯ ಸೇವನೆಯು ಹೆಚ್ಚು ಕಂಡು ಬಂದಿತು. ಸಿಪಿಐ ಸತೀಶ್ ಕುಮಾರ್, ಪಿಎಸ್‌ಐಗಳಾದ ಬಸವರಾಜ್ ತೆಲಿ, ಡಿ. ರವಿಕುಮಾರ್ ಅವರ ತಂಡವು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರು.


**ಕಾಂಪ್ಲೆಕ್ಸ್ ಬಾಡಿಗೆ ದೊರೆಯುತ್ತದೆ**

ಶಾಮನೂರು ರಸ್ತೆ (ಬಾಪೂಜಿ ಸಮುದಾಯ ಭವನದ ಎದುರು) 1400 ಚದರ ಅಡಿ ಇರುವ (ಗ್ರೌಂಡ್, ಫಸ್ಟ್, ಸೆಕೆಂಡ್) ಬ್ಯಾಂಕ್, ಶೋರೂಂ, ಆಸ್ಪತ್ರೆ, ಫುಡ್ ಮಾರ್ಟ್, ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜ್‌ಗೆ ಬಾಡಿಗೆಗೆ ದೊರೆಯುತ್ತದೆ.

**ಸಂಪರ್ಕಿಸಿ: 99801 95022, 82177 73030, 99016 27736**

**ವಿಶೇಷ ಸೂಚನೆ**

**ಸಮಸ್ತ ರೈತ ಬಾಂಧವರ ಗಮನಕ್ಕೆ...**

ವಾರ್ಷಿಕ ಟ್ರಾಕ್ಟರ್ ಬಿಡಿಭಾಗಗಳ ಲೆಕ್ಕ ಪರಿಶೀಲನೆ ಇರುವ ಪ್ರಯುಕ್ತ ನಮ್ಮ ಸೇವಾ ವಿಭಾಗ ಮತ್ತು ಬಿಡಿ ಭಾಗಗಳ ವಿಭಾಗ 3 ದಿನಗಳ ಕಾಲ ಕೆಲಸ ನಿರ್ವಹಿಸುವುದಿಲ್ಲ. ಅಂದರೆ (ಮಂಗಳವಾರ, ಬುಧವಾರ ಮತ್ತು ಗುರುವಾರ) ರಜೆ ಘೋಷಿಸಲಾಗಿದೆ. ಆದ್ದರಿಂದ ಗ್ರಾಹಕರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

**ಮಾರುತಿ ಮೋಟಾರ್ಸ್**

# 1728 / ಎ, ರವಿ ಆಯಿಲ್ ಮಿಲ್ ಎದುರು, ಆವರಗೆರೆ, ದಾವಣಗೆರೆ – 577 003.

**M: 9945866899**

# ಸಿ.ಡಿ. ರಾಜಕೀಯ ಷಡ್ಯಂತ್ರ

## ಎಸ್.ಐ.ಟಿ. ಎದುರು ಹಾಜರಾದ ಜಾರಕಿಹೊಳಿ ಹೇಳಿಕೆ



ಬೆಂಗಳೂರು, ಮಾ.29 - ರಾಸಲೀಲೆ ಸಿ.ಡಿ.ಗೂ ತಮಗೂ ಸಂಬಂಧವಿಲ್ಲ. ರಾಜಕೀಯವಾಗಿ ನನ್ನನ್ನು ಮುಗಿಸಲು ಷಡ್ಯಂತ್ರ ನಡೆದಿದೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಸೋಮವಾರ ಪೊಲೀಸರು ಹಾಗೂ ಎಸ್ಐಟಿ ತನಿಖಾ ಸಂಸ್ಥೆಯ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದಾರೆ.

ಸಂತ್ರಸ್ತ ಯುವತಿ ಸುಪ್ರೀಂ ಕೋರ್ಟ್ ಹಾಗೂ ರಾಜ್ಯ ಹೈಕೋರ್ಟ್‌ಗೆ ಮೋರೆ ಹೋಗಿ, ರಕ್ಷಣೆ ಕೋರುತ್ತಿದ್ದಂತೆ ಜಾರಕಿಹೊಳಿ ತನಿಖಾ ಅಧಿಕಾರಿಗಳ ಮುಂದೆ ಹಾಜರಾಗಿ, ಸುಮಾರು ನಾಲ್ಕು ತಾಸುಗಳ ಕಾಲ ಘಟನೆಯ ಬಗ್ಗೆ ವಿಚಾರಣೆಗೆ ಒಳಗಾಗಿದ್ದಾರೆ. ವಿಚಾರಣೆ ಸಂದರ್ಭದಲ್ಲಿ ತನಿಖಾಧಿಕಾರಿಗಳು ಎಲ್ಲಾ ಕೋನಗಳಿಂದಲೂ ಪ್ರಶ್ನೆ ಮಾಡಿ, ಅವರಿಂದ ಉತ್ತರ ಮತ್ತು ಸತ್ಯ ಬಯಲು ಮಾಡುವ ಪ್ರಯತ್ನ ಮಾಡಿದ್ದರು.

ಆದರೆ ತಮ್ಮ ಹೇಳಿಕೆ ಉದ್ದಕ್ಕೂ ರಾಜಕೀಯವನ್ನೇ ಬೆರೆಸಿರುವ ಜಾರಕಿಹೊಳಿ, ಒಂದು ಸರ್ಕಾರ ತೆಗೆದು, ಮತ್ತೊಂದು ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣನಾದೆ ಎಂಬ ಒಂದೇ ಕಾರಣಕ್ಕೆ ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ.

ಷಡ್ಯಂತ್ರದ ಹಿಂದೆ ಯಾರಿದ್ದಾರೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿರುವ ಮಾಜಿ ಸಚಿವರು, ನನ್ನ ಪ್ರಕರಣದಲ್ಲಿ ಮಾಧ್ಯಮದ ಪ್ರತಿನಿಧಿಗಳು ಆ ವ್ಯಕ್ತಿಯ ಜೊತೆ ಸೇರಿಕೊಂಡಿದ್ದಾರೆ ಎಂದೂ ಆರೋಪಿಸಿದ್ದಾರೆ.

ಆರೋಪ ಮಾಡಿರುವ ಯುವತಿಯ ಕುಟುಂಬದವರು ಈಗಾಗಲೇ ನಿಮ್ಮ ಮುಂದೆ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯನ್ನು ಗಮನಿಸಿದರೆ, ನನ್ನ ವಿರುದ್ಧ ಪಿತೂರಿ ನಡೆದಿರುವುದು ನಿಮ್ಮ ಗಮನಕ್ಕೂ ಬರಬಹುದು.

ನಾನು ಕೇವಲ ರಾಜಕಾರಣಿ ಅಲ್ಲ, ಸಮಾಜ ಸೇವಕ ಹಾಗೂ ಕೈಗಾರಿಕೋದ್ಯಮಿ. ಸಹಕಾರ ಸಂಘದಲ್ಲೂ ಇದ್ದೇನೆ. ಎಲ್ಲಾ ರಂಗಗಳಲ್ಲೂ ನಾನು ಸಕ್ರಿಯವಾಗಿರುವುದರಿಂದ ನನ್ನ ಏಳ್ಗೆಯನ್ನು ಸಹಿಸದವರು ಇಂತಹ ಕುತಂತ್ರ ಮಾಡಿದ್ದಾರೆ.

ಇದರ ಹಿಂದೆ ಅನೇಕ ಕೈಗಳಿವೆ. ನೀವು ತನಿಖೆ ಮಾಡಿ, ಅವರನ್ನು ಶಿಕ್ಷಿಸಿ, ಇದರಲ್ಲಿ ನನ್ನ ಪಾತ್ರವೇನಿಲ್ಲ. ನಾನು ನಿರಾಪರಾಧಿ, ನೀವು ಯಾವಾಗ ಕರೆದರೂ ವಿಚಾರಣೆಗೆ ಹಾಜರಾಗುತ್ತೇನೆ ಎಂದೆಲ್ಲ ತಿಳಿಸಿದ್ದಾರೆ.

ರಾಸಲೀಲೆ ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಯುವತಿ ನೀಡಿದ ದೂರಿನನ್ವಯ ರಮೇಶ್ ಜಾರಕಿಹೊಳಿ ವಿರುದ್ಧ ಎಫ್ಐಆರ್ ದಾಖಲಿಸಿದ ಅಧಿಕಾರಿಗಳು ಒಂದೆರಡು ದಿನಗಳ ಹಿಂದೆಯಷ್ಟೇ ಎಸ್ಐಟಿ ಅಧಿಕಾರಿಗಳು ಅವರ ನಿವಾಸಕ್ಕೆ ತೆರಳಿ ವಿಚಾರಣೆ ನಡೆಸಿದ್ದರು. ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತುತ್ತಿದ್ದಂತೆ ಎಚ್ಚೆತ್ತುಕೊಂಡ ಅಧಿಕಾರಿಗಳು, ವಿಚಾರಣೆಗೆ ಒಳಪಡಿಸಿದರು.

ಈ ಮಧ್ಯೆ ರಾಸಲೀಲೆ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆ ಯುವತಿ ತನ್ನ ಸ್ವಂತ ಇಮೇಲ್ ಮೂಲಕವೇ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದು, ತಮಗೆ ಜೀವ ಭಯವಿದ್ದು, ರಕ್ಷಣೆ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ.

ರಮೇಶ್ ಜಾರಕಿಹೊಳಿ ಪ್ರಭಾವಿ ವ್ಯಕ್ತಿ, ಸಾರ್ವಜನಿಕವಾಗಿ ಜೀವ ಬೆದರಿಕೆ ಹಾಕಿದ್ದಾರೆ. ನನಗೆ ಮತ್ತು ನನ್ನ ಕುಟುಂಬಕ್ಕೆ ರಕ್ಷಣೆ ನೀಡಬೇಕು. ನಿಮ್ಮ ಮೇಲುಸ್ತುವಾರಿಯಲ್ಲೇ ಎಸ್ಐಟಿ ತನಿಖೆ ನಡೆಯಬೇಕೆಂದು ಕೋರಿದ್ದಾರೆ. ಪ್ರಕರಣ ಸಂಬಂಧ ಎಫ್ಐಆರ್ ದಾಖಲಾಗಿದ್ದರೂ, ಆರೋಪಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ನನಗೆ ಅನ್ಯಾಯವಾಗುತ್ತಿದೆ. ನ್ಯಾಯ ಒದಗಿಸಬೇಕು ಎಂದು ಕೇಳಿದ್ದಾರೆ.

ಮತ್ತೊಂದೆಡೆ ಸಂತ್ರಸ್ತ ಯುವತಿ ಪರ ವಕೀಲ ಜಗದೀಶ್ ನಗರದ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ, ನನ್ನ ಕಕ್ಷಿದಾರರು ನ್ಯಾಯಾಲಯದ ಮುಂದೆ ಹೇಳಿಕೆ ನೀಡಲು ಅವಕಾಶ ಮಾಡಿಕೊಡಬೇಕು ಎಂದು ಮಾಡಿದ ಮನವಿಗೆ ನ್ಯಾಯಾಲಯ ಪುರಸ್ಕರಿಸಿದೆ. ನ್ಯಾಯಾಲಯ ಎಂದು ಅವಕಾಶ ಮಾಡಿಕೊಡುತ್ತದೋ ಅಂದೇ ಸಂತ್ರಸ್ತೆ ಹಾಜರಾಗಿ ತನ್ನ ಹೇಳಿಕೆಯನ್ನು ನೀಡಲಿದ್ದಾರೆ ಎಂದು ವಕೀಲರು ಹೇಳಿದ್ದಾರೆ. ಕಾನೂನು ಹೋರಾಟದ ನಡುವೆಯೇ ರಮೇಶ್ ಜಾರಕಿಹೊಳಿ ಅವರನ್ನು ಬಂಧಿಸಬೇಕೆಂದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಮುಂದೆ ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

# ಕಲ್ಲುಗಣಿ ಪುನರಾರಂಭಕ್ಕೆ ಸರ್ಕಾರ ಷರತ್ತಿನ ಅನುಮತಿ

ಬೆಂಗಳೂರು, ಮಾ.29- ಸ್ಥಗಿತಗೊಂಡಿರುವ ಕಲ್ಲು ಗಣಿಗಾರಿಕೆ ಕ್ರಷರ್ ಗಳ ಪುನರಾರಂಭಕ್ಕೆ ರಾಜ್ಯ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಗಣಿ ಸಚಿವ ಮುರುಗೇಶ್ ನಿರಾಣಿ, ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಂಭವಿಸಿದ ಘಟನೆಗಳ ನಂತರ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದರಿಂದ ರಾಜ್ಯದ ಬೊಕ್ಕಸಕ್ಕೆ 300 ಕೋಟಿ ರೂ. ನಷ್ಟವುಂಟಾಗಿತ್ತು ಎಂದಿದ್ದಾರೆ.

ಕಲ್ಲು ಗಣಿಗಾರಿಕೆ ಸ್ಥಗಿತಗೊಳ್ಳುವು ದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಗಳು ಕುಂಠಿತಗೊಳ್ಳುತ್ತವೆ. ಇದನ್ನೆಲ್ಲ ಮನಗಂಡು ಷರತ್ತುಗಳನ್ನು ವಿಧಿಸಿ, ಪುನರಾರಂಭಕ್ಕೆ ಅನುಮತಿ ನೀಡಲಾಗಿದೆ ಎಂದರು. ಸ್ಫೋಟಕ ವಸ್ತುಗಳನ್ನು ಬಳಕೆ ಮಾಡಲು ಮಾಲೀಕರಿಗೆ 90 ದಿನ ದೊಳಗೆ ಪರವಾನಗಿ ನೀಡುವ ಮಹತ್ವದ ನಿರ್ಧಾರವನ್ನು ಇಲಾಖೆ ತೆಗೆದುಕೊಂಡಿದೆ.

ಗಣಿ ಹಾಗೂ ಕ್ರಷರ್ ಉದ್ಯಮಕ್ಕೆ ಸ್ಫೋಟಕ ವಸ್ತುಗಳನ್ನು ಬಳಸುವುದು ಅನಿವಾರ್ಯವಾಗಿದೆ. ಅಭಿವೃದ್ಧಿ ಕಾರ್ಯ ಮುಂದುವರೆಯಬೇಕಾದರೆ ಇದು ಅತ್ಯಗತ್ಯ. ಈಗ ಸ್ಥಗಿತಗೊಂಡಿರುವ ಕಾರಣ ಕಚ್ಚಾ ವಸ್ತುಗಳ ಬೆಲೆ ಹೆಚ್ಚಳವಾಗಿದ್ದು, ಹೊರ ರಾಜ್ಯದವರು ದುಬಾರಿ ಬೆಲೆಯಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಉದ್ಯಮ ನಡೆಸುವ ಮಾಲೀಕರು ಇಲಾಖೆಯ ಷರತ್ತು ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. 90 ದಿನಗಳಲ್ಲಿ ಲೈಸೆನ್ಸ್ ಪಡೆಯುವುದಾಗಿ ಷರತ್ತು ಪತ್ರಕ್ಕೆ ಸಹಿ ಹಾಕಬೇಕು. ಅಲ್ಲದೆ ಹಾಲಿ ಇರುವ ಲೈಸೆನ್ಸ್ ಹೊಂದಿರುವ ಮಾಲೀಕರ ಜೊತೆ ಒಪ್ಪಂದ ಮಾಡಿಕೊಳ್ಳಬೇಕೆಂದು ಸಚಿವರು ಸೂಚನೆ ನೀಡಿದರು.

ಇಂದಿನಿಂದಲೇ ಅನ್ವಯವಾಗುವಂತೆ ಉದ್ದಿಮೆದಾರರು ತಮ್ಮ ಉದ್ಯಮವನ್ನು ಆರಂಭಿಸಬಹುದು. ಪರವಾನಗಿ ನೀಡುವಾಗ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಷರತ್ತುಗಳನ್ನು ವಿಧಿಸಿ ನೀಡಬಹುದು ಎಂದರು.

ಮಾಲೀಕರು ನಷ್ಟದಲ್ಲಿರುವುದರಿಂದ ಬ್ಯಾಂಕ್‌ಗಳಿಗೆ ಪ್ರತಿ ತಿಂಗಳು ಸಂಬಳ ಕಟ್ಟಲು ಸಾಧ್ಯವಾಗುತ್ತಿಲ್ಲ. ಚಟುವಟಿಕೆಗಳು ಸ್ತಬ್ದಗೊಂಡಿರುವ ಕಾರಣ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತದೆ ಎಂದು ಸಚಿವರು ಆತಂಕ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸುಮಾರು 2,500ಕ್ಕೂ ಹೆಚ್ಚು ಕಲ್ಲು ಕ್ವಾರಿ ಗಣಿ ಉದ್ಯಮಗಳಿವೆ. ಇದರಲ್ಲಿ ಶೇ.10ರಷ್ಟು ಉದ್ದಿಮೆದಾರರು ಲೈಸೆನ್ಸ್ ಪಡೆದಿದ್ದರೆ, ಶೇ.90ರಷ್ಟು ಮಂದಿ ಲೈಸೆನ್ಸ್ ಪಡೆದಿಲ್ಲ ಎಂದು ಹೇಳಿದರು.

2 ಕೆಜಿವರೆಗೆ ಸ್ಫೋಟಕಗಳನ್ನು ಬಳಸಲು ಕಾಯ್ದೆಯಲ್ಲಿ ಅವಕಾಶವಿದೆ. 5 ಎಕರೆಗಿಂತ ಕಡಿಮೆ ಜಮೀನಿನಲ್ಲಿ ಗಣಿಗಾರಿಕೆ ಮಾಡುವವರಿಗೆ ಡಿಜಿಎಂಎಸ್ ಪರವಾನಗಿಯನ್ನು ಕಡ್ಡಾಯ



ಮಾಡಬಾರದೆಂದು ಉದ್ದಿಮೆದಾರರು ಮನವಿ ಮಾಡಿದ್ದಾರೆ ಎಂದರು.

ಗಣ ಉದ್ದಿಮೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸುವ ನಿಟ್ಟಿನಲ್ಲಿ ಇಲಾಖೆಯು ಏಪ್ರಿಲ್ 17ರಿಂದ ಜೂ.21ರವರೆಗೆ ರಾಜ್ಯದ ಮೂರು ವಿಭಾಗಗಳಲ್ಲಿ ಗಣಿ ಅದಾಲತ್ ನಡೆಸಲಿದೆ ಎಂದೂ ನಿರಾಣಿ ಇದೇ ಸಂದರ್ಭದಲ್ಲಿ ತಿಳಿಸಿದರು. ಏಪ್ರಿಲ್ 17ರಂದು ಬೆಂಗಳೂರಿನಲ್ಲಿ ಮೊದಲ ಗಣಿ ಅದಾಲತ್ ನಡೆದರೆ, ಏ.30ರಂದು ಬೆಳಗಾವಿ, ಜೂ.21ರಂದು ಮಂಗಳೂರಿನಲ್ಲಿ ಅದಾಲತ್‌ಗಳನ್ನು ನಡೆಸಲಾಗುತ್ತಿದೆ. ಇದರಿಂದಾಗಿ ಉದ್ದಿಮೆದಾರರು ಇಲಾಖೆಯಿಂದ ಇಲಾಖೆಗೆ ಅಲೆಯುವುದು ತಪ್ಪಿದಂತಾಗುತ್ತದೆ.

ಸ್ಥಳದಲ್ಲಿಯೇ ಸಮಸ್ಯೆಗೆ ಎಲ್ಲ ಪರಿಹಾರ ಒದಗಲಿದ್ದು, ತ್ವರಿತ ಮತ್ತು ಸುಲಭವಾಗಿ ಉದ್ಯಮವನ್ನು ನಡೆಸಲು ಅನುಕೂಲವಾಗಲಿದೆ. ಅದಾಲತ್‌ನಲ್ಲಿ ಕಾನೂನು ಸರಳೀಕರಣ ಮಾಡಲಾಗುವುದು, ಅಕ್ರಮ ಮಾಡಿದರೆ ದಂಡದ ಐದು ಪಟ್ಟು ವಸೂಲಿ ಹಾಗೂ ಪ್ರತಿ ಪ್ರಕರಣವನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿ ಸ್ಥಳದಲ್ಲೇ ಪರಿಹಾರ ಒದಗಿಸುವ ವಿನೂತನ ಯೋಜನೆಯೇ ಗಣಿ ಅದಾಲತ್ ಎಂದು ನಿರಾಣಿ ಹೇಳಿದ್ದಾರೆ.

ಗೃಹ ಮತ್ತು ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿಗಳಿಗೆ ಇರುವಂತೆ ಇನ್ನು ಮುಂದೆ ಗಣಿ ಹಾಗೂ ಭೂ ವಿಜ್ಞಾನ ಇಲಾಖೆ ಸಿಬ್ಬಂದಿಗಳಿಗೂ ಕಡ್ಡಾಯವಾಗಿ ಸಮವಸ್ತ್ರ (ಯೂನಿಫಾರಂ) ಜಾರಿಯಾಗಲಿದೆ. ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಶೀಘ್ರದಲ್ಲೇ ಪೊಲೀಸ್ ಮಾದರಿಯಲ್ಲಿ ಸಮವಸ್ತ್ರವನ್ನು ನೀಡಲಾಗುವುದು. ಗಣಿ ಅಧಿಕಾರಿಗಳಿಗೆ ಅವರ ಸ್ಥಾನಮಾನ(ಗ್ರೇಡ್)ಕ್ಕೆ ತಕ್ಕಂತೆ ಸ್ಟಾರ್ ನೀಡಲಾಗುತ್ತದೆ.

ಯಾವುದೇ ಸ್ಥಳದಲ್ಲಾದರೂ ದಿಢೀರನೆ ದಾಳಿ ನಡೆಸುವಾಗ ಸಿಬ್ಬಂದಿಗಳನ್ನು ಕೆಲವರು ಗುರುತಿಸುವುದಿಲ್ಲ. ಕಡೇ ಪಕ್ಷ ಸಿಬ್ಬಂದಿಗಳಿಗೆ ಸಮವಸ್ತ್ರ ನೀಡಿದರೆ ಗುರುತಿಸಲು ಸುಲಭವಾಗುತ್ತದೆ. ಸದ್ಯದಲ್ಲೇ ಸಿಬ್ಬಂದಿಗಳಿಗೆ ಸಮವಸ್ತ್ರಗಳನ್ನು ಕೊಡಲಾಗುವುದು ಎಂದು ಸಚಿವ ನಿರಾಣಿ ತಿಳಿಸಿದ್ದಾರೆ.

ಇದರ ಜೊತೆಗೆ ನಿವೃತ್ತ ಸೇನಾ ಯೋಧರನ್ನು ಇಲಾಖೆಯಲ್ಲಿ ಭದ್ರತಾ ಅಧಿಕಾರಿ (ಸೆಕ್ಯೂರಿಟಿ) ನಿಯೋಜನೆ ಮಾಡಿಕೊಳ್ಳುವ ಚಿಂತನೆಯಿದೆ. ಹೊರಗುತ್ತಿಗೆ ಆಧಾರದ ಮೇಲೆ ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ತುಮಕೂರು ಸೇರಿದಂತೆ ಪ್ರತಿ ಜಿಲ್ಲೆಗೆ ಐವರು ಸಿಬ್ಬಂದಿಯನ್ನು ನೇಮಕ ಮಾಡುವುದರ ಜೊತೆಗೆ ಎಲ್ಲಾ ವಾಹನಗಳಿಗೂ ಜಿಪಿಎಸ್ ಅಳವಡಿಕೆ ಮಾಡಲಾಗುವುದು ಎಂದು ಹೇಳಿದರು.

# ಕೊರೊನಾ ಚಿಂತೆ ದೂರ ಮಾಡಿದ ಹೋಳಿ ಸಂಭ್ರಮ





ರಾಣೇಬೆನ್ನೂರು, ಮಾ.29- ನಗರದಲ್ಲಿ ಇಂದು ನಡೆದ ಬಣ್ಣದ ಹಬ್ಬ ಹೋಳಿ, ಕೊರೊನಾ ಚಿಂತೆಯನ್ನು ದೂರ ಮಾಡಿದಂತೆ ಕಂಡುಬಂದಿತು.

ಬೆಳಗ್ಗೆಯಿಂದಲೇ ಚಿಣ್ಣರು ರಾಜೇಶ್ವರಿನಗರ, ಮೃತ್ಯುಂಜಯನಗರ, ಹೌಸಿಂಗ್ ಬೋರ್ಡ್ ಕಾಲೋನಿ, ಗೌರಿಶಂಕರ ನಗರ, ಬನಶಂಕರಿ ನಗರ, ದೊಡ್ಡಪೇಟೆ, ಕುರುಬಗೇರಿ, ಮಾರುತಿನಗರ, ಕೋಟೆ ಮುಂತಾದ ಪ್ರದೇಶಗಳಲ್ಲಿ ಪರಸ್ಪರ ಬಣ್ಣ ಎರಚುವ ಮೂಲಕ ಹಬ್ಬ ಆರಂಭಿಸಿದರು.

ಹತ್ತು ಗಂಟೆ ನಂತರ ಯುವಕರು, ವಯಸ್ಕರು ರಂಗಿನಾಟಕ್ಕೆ ಮುಂದಾದರು. ಹೌಸಿಂಗ್ ಬೋರ್ಡ್ ಕಾಲೋನಿ, ವೀರಭದ್ರೇಶ್ವರ ನಗರ, ದೊಡ್ಡಪೇಟೆ ಮುಂತಾದ ಪ್ರದೇಶಗಳಲ್ಲಿ ಮಹಿಳೆಯರು ಕೂಡ ಹೆಚ್ಚಿನ ಉತ್ಸಾಹದಿಂದ ಬಣ್ಣದಾಟದಲ್ಲಿ ನಿರತರಾಗಿದ್ದರು.

**ಶಾಸಕರು ಭಾಗಿ:** ಸ್ಥಳೀಯ ಶಾಸಕ ಅರುಣಕುಮಾರ ಪೂಜಾರ್ ತಾವೇ ಸ್ವತಃ ಬೈಕ್ ಮೇಲೆ ಸಂಚರಿಸುತ್ತಾ ಯುವಕರ ತಂಡದೊಂದಿಗೆ ನಗರದ ತುಂಬಾ ಬಣ್ಣದಾಟದಲ್ಲಿ ಭಾಗಿಯಾಗಿದ್ದರು. ಸಂಪ್ರದಾಯದಂತೆ ಮೆರವಣಿಗೆಯಲ್ಲಿ ಹರಿಜನ ಕೇರಿಯಿಂದ ಬೆಂಕಿ ತಂದ ನಂತರ ನಗರದ ವಿವಿಧೆಡೆ ಪ್ರತಿಷ್ಠಾಪಿಸಲಾಗಿದ್ದ ಕಾಮಣ್ಣನ ಮೂರ್ತಿಗಳನ್ನು ದಹಿಸಲಾಯಿತು.

**ಬೈಕ್ ಹೋಳಿ:** ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬೈಕುಗಳ ಮೇಲೆ ತಿರುಗಾಡುತ್ತಾ ಹೋಳಿ ಆಚರಣೆಯಲ್ಲಿ ಪಾಲ್ಗೊಂಡಿದ್ದರು. ಒಂದೇ ಬೈಕಿನ ಮೇಲೆ 3-4 ಜನ ಸೇರಿ ನಗರದ ತುಂಬಾ ಸಂಚರಿಸಿದರು. ಈ ಬಾರಿ ಪುರುಷರಿಗೆ ಸರಿಸಮಾನ ಎನ್ನುವಂತೆ ಮಹಿಳೆಯರು ಕೂಡ ದ್ವಿಚಕ್ರ ವಾಹನಗಳಲ್ಲಿ ನಗರದ ವಿವಿಧ ಭಾಗಗಳಲ್ಲಿ ಸಂಚರಿಸಿ ಬಣ್ಣದಾಟ ಆಡುತ್ತಾ ಹೋಳಿ ಸಂಭ್ರಮಕ್ಕೆ ಮೆರುಗು ತಂದರು.

# ಹೋಳಿ ವೇಳೆ ಪಾನಮತ್ತರಿಂದ ಹತ್ಯೆ

ಎತಾವ, ಮಾ. 29 - ಉತ್ತರ ಪ್ರದೇಶದ ಎತಾವಾದಲ್ಲಿ ಹೋಳಿಯ ಸಮಯದಲ್ಲಿ ಪುಂಡಾಟ ನಡೆಸುತ್ತಿದ್ದವರನ್ನು ವಿರೋಧಿಸಿದ 60 ವರ್ಷದ ಮಹಿಳೆಯನ್ನು ಹತ್ಯೆಗೈದು, ಅವರ ಕುಟುಂಬದ ಐವರನ್ನು ಗಾಯಗೊಳಿಸಿದ ಘಟನೆ ನಡೆದಿದೆ. ಪಾನಮತ್ತರಾಗಿದ್ದ ಕೆಲವರು ಮಹಿಳೆಯ ಮನೆಗೆ ಬೆಳಿಗ್ಗೆ 10 ಗಂಟೆಗೆ ನುಗ್ಗಿ ಬಡಿಗೆ ಹಾಗೂ ಕಲ್ಲುಗಳಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಿಳೆಯನ್ನು ರಕ್ಷಿಸಲು ಯತ್ನಿಸಿದ ಕುಟುಂಬದ ಇಬ್ಬರು ಮಹಿಳೆಯರು ಹಾಗೂ ಮೂವರು ಮಕ್ಕಳು ಸೇರಿದಂತೆ ಐವರನ್ನು ಗಾಯಗೊಳಿಸಲಾಗಿದೆ.

# ಜರ್ಮನಿ : ಹೆಚ್ಚಿದ ಲಸಿಕಾ ರಕ್ತ ಹೆಪ್ಪುಗಟ್ಟುವಿಕೆ

ಬರ್ಲಿನ್, ಮಾ. 29 - ಇತ್ತೀಚೆಗೆ ಅಸ್ಟ್ರಾಜೆನೆಕಾ ಲಸಿಕೆ ಪಡೆದ 21 ಜನರಲ್ಲಿ ಅಪರೂಪದ ರಕ್ತದ ಕಣ ಹೆಪ್ಪುಗಟ್ಟುವ ಸಮಸ್ಯೆ ಕಂಡು ಬಂದಿದೆ ಎಂದು ಜರ್ಮನಿಯ ವೈದ್ಯಕೀಯ ನಿಯಂತ್ರಕ ತಿಳಿಸಿದೆ.

ರಕ್ತ ಹೆಪ್ಪುಗಟ್ಟಿದ ಕಾರಣದಿಂದಾಗಿ ಏಳು ಜನರು ಸಾವನ್ನಪ್ಪಿದ್ದಾರೆ ಎಂದು ಪೌಲ್ ಎಹರಿಚ್ ಇನ್‌ಸ್ಟಿಟ್ಯೂಟ್ ತಿಳಿಸಿದೆ.


ರಕ್ತ ಹೆಪ್ಪುಗಟ್ಟುವ ಘಟನೆಗಳ ಹಿನ್ನೆಲೆಯಲ್ಲಿ ಯುರೋಪಿನ ಹಲವು ದೇಶಗಳು ಅಸ್ಟ್ರಾಜೆನೆಕಾ ಲಸಿಕೆಗಳಿಗೆ ತಡೆ ಹಾಕಿವೆ. ಜರ್ಮನಿಯಲ್ಲಿ 22.7 ಲಕ್ಷ ಜನರಿಗೆ ಇದುವರೆಗೂ ಅಸ್ಟ್ರಾಜೆನೆಕಾ ಲಸಿಕೆ ನೀಡಲಾಗಿದೆ. ಇವರಲ್ಲಿ 21 ಜನರಲ್ಲಿ ರಕ್ತ ಹೆಪ್ಪುಗಟ್ಟಿದ ಸಮಸ್ಯೆ ಕಂಡು ಬಂದಿದೆ.

# ಶಿವಸಿಂಪಿ ಸಮಾಜಕ್ಕೆ ದೂಡದಿಂದ ನಿವೇಶನ ಪತ್ರ ವಿತರಣೆ



ದಾವಣಗೆರೆ,ಮಾ.29- ಜಿಲ್ಲಾ ಶಿವಸಿಂಪಿ ಸಮಾಜಕ್ಕೆ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಮೂಲೆ ನಿವೇಶನ ಪತ್ರವನ್ನು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವರು ಸಮಾಜ ಬಾಂಧವರಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಶಿವಸಿಂಪಿ ಸಮಾಜದ ಅಧ್ಯಕ್ಷ ಬೂಸ್ನೂರು ಗುರುಬಸಪ್ಪ, ಜಿಲ್ಲಾ ಕಾರ್ಯದರ್ಶಿ ಬಾವಿಕಟ್ಟೆ ಜಗದೀಶ್, ಮುಖಂಡರಾದ ಟಿಂಕರ್ ಮಂಜಣ್ಣ, ಜಿ.ಬಿ. ಶ್ರೀಕಂಠರಾಜು ಉಪಸ್ಥಿತರಿದ್ದರು.

# ಅನರ್ಹ ಪಡಿತರ ಚೀಟಿದಾರರು ಬಿಪಿಎಲ್ ಪಡಿತರ ಚೀಟಿ ಅಧ್ಯರ್ಪಿಸಲು ಡಿಸಿ ಸೂಚನೆ



ದಾವಣಗೆರೆ, ಮಾ.29- ಅನರ್ಹ ಪಡಿತರ ಚೀಟಿದಾರರು ತಾವು ಪಡೆದಿರುವಂತಹ ಅಂತ್ಯೋದಯ/ ಆದ್ಯತಾ (ಬಿಪಿಎಲ್) ಪಡಿತರ ಚೀಟಿಯನ್ನು ಸ್ವಯಂ ಪ್ರೇರಿತವಾಗಿ ಏ.15 ರೊಳಗೆ ಅರ್ಧ್ಯಪಡೆ ಮಾಡಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಅಥವಾ ದಂಡ ವಸೂಲಿ ಮಾಡುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರಿ ನೌಕರರ ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಸಗಿ ನೌಕರರು ಮತ್ತು ಸರ್ಕಾರಿ ಅನುದಾನಿತ ನೌಕರರು, ನಿಗಮಗಳು, ಮಂಡಳಿಗಳು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ, ಸೇವಾ ತೆರಿಗೆ, ವ್ಯಾಟ್, ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು.

ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು, ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನ ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿರುವ ಕುಟುಂಬಗಳು, ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು, ಒಂದೇ ಕುಟುಂಬದಲ್ಲಿದ್ದರೂ ಒಟ್ಟಿಗೆ ವಾಸಿಸುತ್ತಿದ್ದರೂ ಪ್ರತ್ಯೇಕ ಪಡಿತರ ಚೀಟಿ ಹೊಂದಿರುವವರು ಆದ್ಯತಾ (ಬಿಪಿಎಲ್) ವರ್ಗದ (ಎಎವೈ/ಪಿಹೆಚ್‌ಹೆಚ್) ಪಡಿತರ ಚೀಟಿಗಳನ್ನು ಹೊಂದಿರುವುದು ಕಾನೂನು ಬಾಹಿರ ಕ್ರಮವಾಗಿರುತ್ತದೆ.

ಆದ್ದರಿಂದ ಇವರು ಏ.15 ರ ಒಳಗಾಗಿ ಪಡಿತರ ಚೀಟಿಗಳನ್ನು ಸ್ವಯಂ ಪ್ರೇರಿತವಾಗಿ ಅಧ್ಯರ್ಪಣೆ ಮಾಡಿದರೆ ಅಂಥವರ ವಿರುದ್ಧ ಯಾವುದೇ ಕಾನೂನು ಕ್ರಮ ಅಥವಾ ದಂಡ ವಸೂಲಿ ಮಾಡಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ಬುಡಕಟ್ಟು ಸಾಹಿತ್ಯ ಮತ್ತು ಸಂಸ್ಕೃತಿ ಕಮ್ಮಟಕ್ಕೆ ಅರ್ಜಿ


ದಾವಣಗೆರೆ, ಮಾ.29- ಕರ್ನಾಟಕ ಸಾಹಿತ್ಯ ಅಕಾಡೆಮಿಯು 2021 ರ ಮೇ ತಿಂಗಳಿನಲ್ಲಿ ಗಿರಿಜನ ಉಪಯೋಜನೆಯಡಿ ರಾಜ್ಯಮಟ್ಟದ 5 ದಿನಗಳ ಬುಡಕಟ್ಟು ಸಾಹಿತ್ಯ ಮತ್ತು ಸಂಸ್ಕೃತಿ ಕಮ್ಮಟ ಆಯೋಜಿಸಲು ಉದ್ದೇಶಿಸಿದ್ದು, ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯಿರುವ 20 ರಿಂದ 50 ವರ್ಷದೊಳಗಿನ ವಯಸ್ಸಿನ ರಾಜ್ಯದ ಎಲ್ಲ ಭಾಗದ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಏ.20 ಕೊನೆಯ ದಿನಾಂಕವಾಗಿದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ http://karnatakasahityaacademy.org ವೆಬ್‌ಸೈಟ್ ಮೂಲಕ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್ ತಿಳಿಸಿದ್ದಾರೆ.

# ರ್‍ಯಾಂಕ್ ವಿಜೇತರಿಗೆ ನಸೀರ್ ಅಹ್ಮದ್‌ರಿಂದ ಬಂಗಾರದ ಪದಕ



ದಾವಣಗೆರೆ, ಮಾ.29- ದಾವಣಗೆರೆ ವಿಶ್ವವಿದ್ಯಾನಿಲಯದ ರ್‍ಯಾಂಕ್ ವಿಜೇತರಿಗೆ 2 ಬಂಗಾರದ ಪದಕಗಳನ್ನು ಈ ವರ್ಷದಿಂದ ಪ್ರತಿ ವರ್ಷ ಕೊಡುಗೆಯಾಗಿ ನೀಡುವುದಾಗಿ ಸಾಮಾಜಿಕ ಸೇವಾ ಕಾರ್ಯಕರ್ತ ಸಿ.ಆರ್. ನಸೀರ್ ಅಹ್ಮದ್ ತಿಳಿಸಿದ್ದಾರೆ.

ತನ್ನ ತಂದೆ-ತಾಯಿ ದಿ. ಶ್ರೀಮತಿ ಸಬೀರಾ ಮತ್ತು ಸಿ. ಅಬ್ದುಲ್ ರಹೀಂ ದಂಪತಿ ಹೆಸರಿನಲ್ಲಿ ಈ ಕೊಡುಗೆ ನೀಡುವುದಾಗಿ ಹೇಳಿರುವ ಅವರು, ದೇಣಿಗೆಯ ಚೆಕ್ಕನ್ನು ದಾವಣಗೆರೆ ವಿವಿ ಮೌಲ್ಯಮಾಪನ ಕುಲಸಚಿವರಾದ ಶ್ರೀಮತಿ ಅನಿತಾ ಅವರಿಗೆ ಸಲ್ಲಿಸಿದ್ದಾರೆ.



**ದಾವಣಗೆರೆ : ನಿವೃತ್ತ ಶಿಕ್ಷಕರೂ ಆಗಿರುವ 'ದಯಾಮರಣ' ಹೋರಾಟಗಾರ್ತಿ ಶ್ರೀಮತಿ ಹೆಚ್.ಬಿ. ಕರಿಬಸಮ್ಮ ಅವರು ಸೋಮವಾರ 'ಕೋವ್ಯಾಕ್ಸಿನ್' ಲಸಿಕೆ ಪಡೆದರು.**

# ಎಸಿಬಿ ಬಲೆಗೆ ಬಿದ್ದ ಜಗಳೂರು ಬಿಇಒ



ಜಗಳೂರು, ಮಾ.29- ನಿಯೋಜನೆ ಮಾಡಲು ಶಿಕ್ಷಕರೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ವೇಳೆ ಬಿಇಒ ಸಿ.ಎಸ್. ವೆಂಕಟೇಶ್ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದ ಘಟನೆ ಸೋಮವಾರ ಸಂಜೆ ನಡೆದಿದೆ.

ಪಟ್ಟಣದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬಿಇಒ ಕೊಠಡಿಯಲ್ಲಿ ಶಿಕ್ಷಣ ಸಂಯೋಜಕರಾದ ಮಂಜಪ್ಪನವರ ಸಮಕ್ಷಮ ಬಿಇಒ ಸಿ.ಎಸ್. ವೆಂಕಟೇಶ್ ಅವರು ಶಿಕ್ಷಕ ಅಂಜಿನಾಯ್ಕ್ ಅವರಿಂದ 10 ಸಾವಿರ ರೂ. ಲಂಚದ ಹಣ ಸ್ವೀಕರಿಸುತ್ತಿದ್ದ ವೇಳೆ ಎಸಿಬಿ ಅಧಿಕಾರಿಗಳು ದಸ್ತಗಿರಿ ಮಾಡಿದ್ದಾರೆ. ಶಿಕ್ಷಕ ಆಂಜನೇಯ ನಾಯ್ಕ ತಾಲ್ಲೂಕಿನ ಜಾಲಿನಗರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ನಿಯೋಜನೆ ಮಾಡಿಕೊಡಲು ಬಿಇಒ ಅವರಿಗೆ ಕೋರಿಕೊಂಡಿದ್ದರು. ಈ ಸಮಯದಲ್ಲಿ ಬಿಇಒ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಪೂರ್ವ ವಲಯ ಎಸಿಬಿ ಪೊಲೀಸ್ ಅಧೀಕ್ಷಕ ಜಯಪ್ರಕಾಶ್ ಮಾರ್ಗದರ್ಶನದಂತೆ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ಎಸ್. ಸುಧೀರ್, ಪಿಐಗಳಾದ ಮಧುಸೂದನ್, ರವೀಂದ್ರ ಎಂ. ಕುರುಬಗಟ್ಟಿ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte